ANANTHKUMAR PRATISHTHANA

# ಅನಂತಪಥ

ಪುಟ 9
ಸ್ವಾಮಿ ರಾಮಭದ್ರಾಚಾರ್ಯ
ವ್ಯಕ್ತಿ ವಿಶೇಷ ಮಾಲಿಕೆ



ಸಂಪುಟ - 4 ಜನವರಿ - 2024 ಸಂಚಿಕೆ - 43

# ಅಯೋಧ್ಯೆಯಲ್ಲಿ ಅದಮ್ಯಚೇತನ

ಸಮಗ್ರ ಭಾರತದೇಶವೇ ಇದಿರುನೋಡುತ್ತಿರುವ ಶುಭಗಳಿಗೆ ಸನಿಹವಾಗಿದೆ. ಅಯೋಧ್ಯೆಯಲ್ಲಿ ಶ್ರೀರಾಮನ ದೇಗುಲ ನಿರ್ಮಾಣಗೊಂಡು ರಾಮನ ವಿಗ್ರಹದ ಪ್ರತಿಷ್ಠಾಪನೆಯಾಗುವುದನ್ನು ಕಣ್ತುಂಬಿಕೊಳ್ಳಲು ಪ್ರಜೆಗಳು ಕಾತರದಿಂದ ನಿರೀಕ್ಷಿಸುತ್ತಿದ್ದಾರೆ. ಈ ಪತ್ರಿಕೆ ನಿಮ್ಮ ಕೈಸೇರುವ ಹೊತ್ತಿಗೆ ಕೋಟ್ಯಂತರ ಕಂಠಗಳ ಮಂಗಳಘೋಷದ ಮೊಳಗು ದೇಶವಿಡೀ ಅನುರಣಿಸುತ್ತಿರುವುದರಲ್ಲಿ ಸಂಶಯವಿಲ್ಲ.



ಈ ಶುಭಸಂದರ್ಭದಲ್ಲಿ ಶ್ರೀರಾಮ ದೇಗುಲದ ಲೋಕಾರ್ಪಣೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿರುವ ಗಣ್ಯರಲ್ಲಿ ಅದಮ್ಯಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರರೂ ಒಬ್ಬರು. ಮಾತ್ರವಲ್ಲ, ಅಯೋಧ್ಯೆಗೆ ಬರುವ ಅಸಂಖ್ಯ ಜನರ ಸತ್ಕಾರದಲ್ಲಿ ಅದಮ್ಯಚೇತನ ಸಂಸ್ಥೆಯೂ ಭಾಗಿಯಾಗುತ್ತಿರುವುದೊಂದು ವಿಶೇಷ. ಮುಂಬರುವ ದಿನಗಳಲ್ಲಿ ಅಯೋಧ್ಯೆಗೆ ಬರಲಿರುವ ಸಾರ್ವಜನಿಕರ ಊಟೋಪಚಾರವನ್ನು ನೋಡಿಕೊಳ್ಳಲು ಅಯೋಧ್ಯೆಯ ದೇಗುಲಸಮಿತಿಯು ಹಲವಾರು ಸೇವಾಸಂಸ್ಥೆಗಳಿಗೆ ಅವಕಾಶ ಕಲ್ಪಿಸಿದ್ದು, ಇವುಗಳ ಪೈಕಿ ಅದಮ್ಯಚೇತನ ಸಂಸ್ಥೆಯೂ ಸೇರಿದೆಯೆನ್ನುವುದು ಈ ಸಂಸ್ಥೆಯ ಆದರ್ಶ, ಸೇವಾಸಂಕಲ್ಪ ಮತ್ತು ನಿರಂತರ ನಿಷ್ಠೆಗಳಿಗೆ ಸಂದ ಗೌರವವೇ ಆಗಿದೆ. ಅಯೋಧ್ಯೆಯ ಸಮಿತಿಯ ಆಶಯಕ್ಕನುಗುಣವಾಗಿ, ಒಂದು ತಿಂಗಳ ಅವಧಿಯಲ್ಲಿ ಅಯೋಧ್ಯೆಗೆ ಆಗಮಿಸಲಿರುವ ಸಾರ್ವಜನಿಕರಲ್ಲಿ ಪ್ರತಿನಿತ್ಯ ಸಾವಿರ ಮಂದಿಗೆ ಆಹಾರವನ್ನು ನೀಡಲು ಅದಮ್ಯಚೇತನವು ಹೊಣೆವಹಿಸಿಕೊಂಡಿದೆ. ಬೆಳಗಿನ ಉಪಾಹಾರವಾಗಿ ಇಡ್ಲಿಸಾಂಬಾರ್, ಉಪ್ಪಿಟ್ಟು; ಮಧ್ಯಾಹ್ನದ ಊಟಕ್ಕೆ ಬಿಸಿಬೇಳೆಬಾತ್, ರಾತ್ರಿ ಖಿಚಡಿ ಅಥವಾ ಪೊಂಗಲ್ ತಯಾರಿಸಿ ವಿತರಿಸುವ ಉದ್ದೇಶದಿಂದ ಅದಮ್ಯಚೇತನವು ತಕ್ಕ ಸಿದ್ಧತೆಮಾಡಿಕೊಂಡಿದೆ. ಅಯೋಧ್ಯೆಯಲ್ಲೂ ತನ್ನ ಪರಿಸರ ಸ್ನೇಹಿ ಧ್ಯೇಯವನ್ನು ಮುಂದುವರಿಸಲಿದ್ದು ಆಹಾರವಿತರಣೆಯಲ್ಲಿ ಮರುಬಳಸಬಹುದಾದ ಸ್ಟೀಲ್ ತಟ್ಟೆ, ಬಟ್ಟಲು, ಚಮಚಗಳನ್ನೇಬಳಸಲಿದೆ. ಅಡುಗೆ ಮತ್ತು ಊಟದ ತ್ಯಾಜ್ಯಗಳನ್ನು ಬಳಸಿ ಸಾವಯವ ಗೊಬ್ಬರವಾಗಿ ಪರಿವರ್ತಿಸಬಲ್ಲ 'ವರಾಹ' ಉಪಕರಣವನ್ನು ಅದಮ್ಯಚೇತನ ಕೇಂದ್ರದ ಆವರಣದಲ್ಲಿ ಸ್ಥಾಪಿಸಲಾಗುತ್ತಿದೆ. ಆಹಾರತಯಾರಿಕೆ ಮತ್ತು ವಿತರಣೆಯ ಸೇವಾಕಾರ್ಯದಲ್ಲಿ ತೊಡಗಿಕೊಳ್ಳಲು ಹದಿನಾಲ್ಕು ಜನರ ತಂಡವು ಈಗಾಗಲೇ ಅಯೋಧ್ಯೆಗೆ ತಲುಪಿದ್ದು ಚಟುವಟಿಕೆಯಲ್ಲಿ ತೊಡಗಿಕೊಂಡಿದೆ. ತಂಡದ ಸದಸ್ಯರಾದ ಸರ್ವಶ್ರೀ ರಾಜಾರಾಮ ಭಟ್, ದೀಪಕ್, ಶ್ರೀನಿಧಿ, ಶ್ರೀಕಾಂತ ಪ್ರಸಾದ್, ಮುತ್ತಣ್ಣ, ಸುರೇಶ್, ಗಿರಿ, ಮಹಾದೇವಸ್ವಾಮಿ, ಸಂಗಪ್ಪ, ಪಿ. ಬಸವರಾಜ್, ಅರುಣ್ ಲಕ್ಷ್ಮಣ್, ಮಹಾಂತೇಶ್ ಮತ್ತು ಎಸ್. ಬಸವರಾಜ್ ಮೊದಲಾದವರನ್ನು ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ.ವಿ. ಕೃಷ್ಣಭಟ್ಟರ ಸಮ್ಮುಖದಲ್ಲಿ ಅದಮ್ಯಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಸಂಸ್ಥೆಯ ಕಾರ್ಯಕರ್ತರು ಹೃತ್ಪೂರ್ವಕವಾಗಿ ಬೀಳ್ಕೊಟ್ಟರು. ಈ ಸತ್ಕಾರ್ಯದಲ್ಲಿ ಪಾಲ್ಗೊಂಡಿರುವ ಸರ್ವರಿಗೂ ಅನಂತಪಥದ ಪರವಾಗಿ ಶುಭಾಶಯಗಳು.

## ದೇವಾಲಯ ವಾಸ್ತುಶಿಲ್ಪದ ಹಿರಿಮೆ : ವಿಚಾರ ಸಂಕಿರಣ





ಭಾರತೀಯ ದೇವಾಲಯ ವಾಸ್ತುಶಿಲ್ಪದ ಹಿರಿಮೆಯನ್ನು ಪರಿಚಯಿಸುವ ಸಲುವಾಗಿ, ಬಿಎಂಎಸ್ ಕಾಲೇಜ್ ಆಫ್ ಆರ್ಕಿಟೆಕ್ಚರ್ ಮತ್ತು ಅನಂತಕುಮಾರ್ ಪ್ರತಿಷ್ಠಾನ ಸಂಸ್ಥೆಗಳು ಸಂಯುಕ್ತವಾಗಿ ಏರ್ಪಡಿಸಿದ್ದ 'ದೇವಾಲಯ ವಾಸ್ತುಶಿಲ್ಪಗಳ ಅದ್ಭುತಗಳು' ಎಂಬ ಸಮಕಾಲೀನ ಮಹತ್ವದ ವಿಚಾರಸಂಕಿರಣವು ದಿನಾಂಕ ೨೯/೧೨/೨೦೨೩ರಂದು ಬೆಂಗಳೂರಿನಲ್ಲಿ ಜರುಗಿತು. ಶ್ರೀ ಶತಾವಧಾನಿ ಆರ್ ಗಣೇಶ್ (ಖ್ಯಾತ ಬರಹಗಾರರು ಮತ್ತು ವಿದ್ವಾಂಸರು), ಡಾ. ಆರ್ ಜಗನ್ನಾಥನ್ (ವಾಸ್ತುತಜ್ಞರು ಮತ್ತು ಜಿಯೋಬಯಾಲಜಿಸ್ಟ್), ಡಾ. ರಮೇಶ ನಾಯಕ (ಪ್ರೊಫೆಸರ್, ಐಐಟಿ ಧಾರವಾಡ) ಮತ್ತು ಶ್ರೀ ಕೆ. ಕೆ. ಮೊಹಮ್ಮದ್ (ಪುರಾತತ್ವಶಾಸ್ತ್ರಜ್ಞರು) ಅವರು ವಿಷಯ ತಜ್ಞರಾಗಿ ಭಾಗವಹಿಸಿದ್ದರು.

ಭಾರತೀಯ ದೇವಾಲಯಗಳ ವಾಸ್ತುಶಿಲ್ಪ ಮತ್ತು ವಿಕಾಸ ಎಂಬ ವಿಷಯದ ಮೇಲೆ ಮಾತನಾಡಿದ ಡಾ. ಶತಾವಧಾನಿ ಆರ್. ಗಣೇಶ್ ಅವರು ಭಾರತದ ಕಲೆ, ಸಾಹಿತ್ಯ, ಸಂಸ್ಕೃತಿ ಎಲ್ಲವೂ ವೇದಗಳಿಗೆ ಮತ್ತು ವೈದಿಕ ಸಾಹಿತ್ಯಗಳಿಗೆ ಋಣಿಯಾಗಿವೆ ಎಂದು ಹೇಳಿದರು. ಯಾವುದು ವೈಶ್ವಿಕವೋ ಅದು ಭಾರತೀಯ, ಯಾವುದು ಭಾರತೀಯವೋ ಅದು ವೈಶ್ವಿಕ ಎಂದು ಅಭಿಪ್ರಾಯಪಟ್ಟ ಅವರು, ಭಾರತೀಯ ದೇವಾಲಯಗಳನ್ನು 'ದೇಹೋ ದೇವಾಲಯಃ ಪ್ರೋಕ್ತೋ ಜೀವ ಏವ ಮಹೇಶ್ವರಃ' ಎಂಬ ತತ್ತ್ವದ ಆಧಾರದ ಮೇಲೆ ನಿರ್ಮಿಸಲಾಗಿದೆ ಎಂದರು. ದೇವಾಲಯಗಳಲ್ಲಿ ಇಂದು ಪ್ರತಿಷ್ಠಾಪಿತವಾಗುತ್ತಿರುವ ದೇವತಾ ವಿಗ್ರಹಗಳ ಲಕ್ಷಣಗಳನ್ನೂ ವೇದಗಳಲ್ಲಿಯೇ ವಿವರಿಸಲಾಗಿದೆ ಎಂದೂ ಅವರು ತಿಳಿಸಿದರು. ಬಯೋಜಿಯಾಲಜಿಸ್ಟ್ ಹಾಗೂ ಆರ್ಕಿಟೆಕ್ಟ್ ಡಾ. ಆರ್. ಜಗನ್ನಾಥನ್ ಅವರು 'ವಾಸ್ತು ಪುರುಷ ಮಂಡಲದ ಆಧಾರದ ಮೇಲೆ ಕಟ್ಟಡಗಳ ವಿನ್ಯಾಸ' ಎಂಬ ವಿಷಯದ ಮೇಲೆ ಮಾತನಾಡಿ, ದೇವಾಲಯಗಳ ವಿನ್ಯಾಸವು ಬರೀ ಕಲ್ಪನೆಯಲ್ಲ. ಅದು ವ್ಯಕ್ತಿಯ ಮನೋ-ದೈಹಿಕ ಸ್ಥಿತಿಯನ್ನು

ಪುಟ 4 ರಲ್ಲಿ ಮುಂದುವರಿದಿದೆ




**"ಅಯೋಧ್ಯೆಯ ಮೈಕೊರೆಯುವ ಚಳಿಯಲ್ಲಿಯೂ ಅದಮ್ಯಚೇತನ ಸಂಸ್ಥೆಯ ಸದಸ್ಯರು ದಕ್ಷಿಣ ಭಾರತದ ಆಹಾರವನ್ನು ಬಿಸಿಬಿಸಿಯಾಗಿ ತಯಾರಿಸಿ ವಿತರಿಸಲು ಸನ್ನದ್ಧರಾಗುತ್ತಿದ್ದಾರೆ"**

(ಇತರ ಚಿತ್ರಗಳು:- ಎಂಟನೇ ಪುಟದಲ್ಲಿ)

# ಹೊಸಹೊಳಲಿನ ಲಕ್ಷ್ಮೀನಾರಾಯಣ

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್

ಹೊಸಹೊಳಲು ಎಂದರೆ ಹೊಸ ಪಟ್ಟಣ. ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ಎಂಬ ತಾಲ್ಲೂಕು ಕೇಂದ್ರದ ಹೊರವಲಯದಲ್ಲಿರುವ ಈ ಪುರಾತನ ಹೊಸಹೊಳಲು ಈಗ ಹಳೆಯ ಊರಾಗಿದೆ. ಆದರೆ ಇಲ್ಲಿರುವ ಹೊಯ್ಸಳ ಕಾಲದ ಲಕ್ಷ್ಮೀನಾರಾಯಣ ದೇವಾಲಯ ಶತಶತಮಾನಗಳಿಂದ ತನ್ನ ಶಿಲ್ಪವೈಭವವನ್ನು ಮೆರೆಸುತ್ತಾ ನೋಡುಗರಿಗೆ ಹೊಸಹೊಳಲಾಗಿಯೇ ಇದೆ. 'ಬೇಲೂರ ಗುಡಿಯ ಒಳಗೆ ನೋಡು, ಹಳೇಬೀಡಿನ ಗುಡಿಯ ಹೊರಗೆ ನೋಡು, ಹೊಸಹೊಳಲಿನ ಒಳಗೂ ಹೊರಗೂ ನೋಡು' ಎಂಬ ನಾಣ್ಣುಡಿ ಈ ದೇಗುಲಕ್ಕೆ ಹೊಯ್ಸಳವಾಸ್ತುಶಿಲ್ಪದ ಶ್ರೇಷ್ಠ ಮಾದರಿಯ ಸ್ಥಾನವನ್ನೇನೋ ಕಲ್ಪಿಸಿದೆ. ಕಾಲಾಂತರದ ಕುಚೇಷ್ಟೆಗಳನ್ನು ಸಹಿಸಿಕೊಂಡು ಈ ಪುರಾತನ ದೇಗುಲ, ತನ್ನ ಪ್ರತಿಷ್ಠೆಯನ್ನು ಒಂದಿಷ್ಟಾದರೂ ಉಳಿಸಿಕೊಂಡಿರುವುದಕ್ಕಾಗಿ ಸಂತೋಷಿಸಬೇಕು.

ಜಾವಗಲ್, ನುಗ್ಗೇಹಳ್ಳಿ, ಸೋಮನಾಥಪುರ ಮತ್ತಿತರ ದೇಗುಲಗಳ ವಾಸ್ತುಶೈಲಿಯನ್ನು ಅತಿನಿಕಟವಾಗಿ ಹೋಲುವುದರಿಂದ ಹೊಸಹೊಳಲಿನ ಈ ದೇವಾಲಯವೂ ಕ್ರಿ.ಶ, 13ನೆಯ ಶತಮಾನದ ಮಧ್ಯಭಾಗದಲ್ಲಿ ಹೊಯ್ಸಳ ಅರಸ ಸೋಮೇಶ್ವರನ ಕಾಲದಲ್ಲಿ ನಿರ್ಮಿತವಾಗಿರಬೇಕೆಂದು ಊಹಿಸಲಾಗಿದೆ. ಖ್ಯಾತ ಶಿಲ್ಪಿ ಮಲ್ಲಿತಂಮನೇ ಈ ಗುಡಿಯ ನಿರ್ಮಾಣದಲ್ಲೂ ಭಾಗವಹಿಸಿದ್ದಿರಬಹುದು.









ಇದೊಂದು ತ್ರಿಕೂಟಾಚಲ ದೇಗುಲ. ಆದರೆ ನಡುವಣ ಗರ್ಭಗುಡಿಯ ಮೇಲೆ ಮಾತ್ರವೇ ಶಿಖರ ಕಂಡುಬರುತ್ತದೆ. ನಾಲ್ಕು ಸ್ತರದ ಅಲಂಕರಣಗಳು, ಅದರ ಮೇಲೆ ಮೊಗುಚಿದ ಕಮಲದಂತಹ ಶಿಖರ, ಎಲ್ಲಕ್ಕೂ ಮೇಲೆ ಕಳಶ- ಆಕರ್ಷಕವಾಗಿ ಕಾಣುತ್ತವೆ. ಗೋಪುರದ ಅಲಂಕರಣಗಳ ನಡುವೆ ಕಾಳಿಂಗಮರ್ದನ, ಲಕ್ಷ್ಮೀನಾರಾಯಣ ಮೊದಲಾದ ಮೂರ್ತಿಗಳನ್ನು ಕಾಣಬಹುದು. ದೇವಾಲಯದ ಹಿಂಬದಿಯ ಮೂರು ದಿಕ್ಕುಗಳಲ್ಲಿ ಕೆಳಗೋಡೆಯಿಂದ ಮುಂದಕ್ಕೆ ಕಿರುಗೋಪುರಗಳು ವಿಸ್ತರಿಸಿಕೊಂಡಿರುವುದೊಂದು ವಿಶೇಷ. ಗರ್ಭಗುಡಿಯಲ್ಲಿ ಎಡಕ್ಕೆ ವೇಣುಗೋಪಾಲ, ನಡುವೆ ಲಕ್ಷ್ಮೀನಾರಾಯಣನ ಗುಡಿ, ಬಲಕ್ಕೆ ಲಕ್ಷ್ಮೀನರಸಿಂಹ. ಈಗಿರುವ ವೇಣುಗೋಪಾಲನ ಮೂರ್ತಿಯನ್ನು ಇತ್ತೀಚೆಗೆ ಪ್ರತಿಷ್ಠಾಪಿಸಲಾಗಿದ್ದು ಉಳಿದವು ಹೊಯ್ಸಳ ಕಾಲದವು. ಗರುಡನ ಪೀಠದ ಮೇಲೆ ನಾರಾಯಣನ ಮೂರ್ತಿ. ಲಕ್ಷ್ಮೀನರಸಿಂಹನ ಪ್ರಭಾವಳಿಯ ಸುತ್ತ ದಶಾವತಾರದ ಕೆತ್ತನೆಯಿದೆ. ಆಯಾ ಗರ್ಭಗುಡಿಯ ದ್ವಾರಪಟ್ಟಕದ ಮೇಲೆ ಆಯಾ ಪೂಜಾಮೂರ್ತಿಯ ಶಿಲ್ಪವನ್ನು ಚಿತ್ರಿಸಿದೆ, ಬಾಗಿಲವಾಡ, ದ್ವಾರಪಾಲಕರು, ಭುವನೇಶ್ವರಿ, ನವರಂಗದ ಕಂಬಗಳು ಎಲ್ಲದರ ಸೂಕ್ಷ್ಮಕೆತ್ತನೆ ನೋಡುಗರನ್ನು ಬೆರಗುಗೊಳಿಸುವುದರಲ್ಲಿ ಸಂಶಯವಿಲ್ಲ. ಗರ್ಭಗುಡಿಯ ಆಚೀಚೆ ಇರುವ ದೇವಕೋಷ್ಠಗಳಲ್ಲಿ ಗಣೇಶ ಮತ್ತು ಮಹಿಷಾಸುರಮರ್ದಿನಿಯರ ಮೂರ್ತಿಗಳಿದ್ದು ಈ ವಿಗ್ರಹಗಳಷ್ಟೇ ಕೋಷ್ಠಗಳ ಕಿರುಗೋಪುರದ ಅಲಂಕರಣವೂ ಸೊಗಸಾಗಿದೆ.



ಹೊರಗೋಡೆಯ ತಳಭಾಗದ ಪಟ್ಟಿಕೆಗಳಲ್ಲಿ ಆನೆ, ಕುದುರೆ, ಹಂಸ, ವ್ಯಾಳ, ಹೂಬಳ್ಳಿಗಳಲ್ಲದೆ ಪೌರಾಣಿಕ ಕಥಾನಕಗಳ ಆಕರ್ಷಕ ನಿರೂಪಣೆಯಿದೆ. ಸಮುದ್ರಮಥನದಂತಹ ಕಥಾನಕವೇ ಅಲ್ಲದೆ, ರಾಮಾಯಣ, ಮಹಾಭಾರತ, ಶ್ರೀಕೃಷ್ಣಕಥೆಗೆ ಸಂಬಂಧಿಸಿದ ಅನೇಕ ಘಟನೆಗಳನ್ನು ಈ ಪಟ್ಟಿಕೆಯ ಮೇಲೆ ಚಿತ್ರಿಸಿದೆ. ಭಿತ್ತಿಯನ್ನು ಕಿರುಸೂರೊಂದು (ಕೂಟಛಾದ್ಯ) ಎರಡು ಭಾಗವಾಗಿಸಿದೆ. ಕೂಟಛಾದ್ಯದಿಂದ ಮೇಲಿರುವ ಗೋಡೆಯಲ್ಲಿ ಕಿರುಗೋಪುರಗಳೂ ಕಿರುಗಂಬಗಳೂ ಮೇಲುಸೂರಿನವರೆಗೆ ವಿಸ್ತರಿಸಿಕೊಂಡು ಇಡೀ ಕಟ್ಟಡದ ಶಿಲ್ಪವಿನ್ಯಾಸಕ್ಕೆ ಮೆರುಗು ತಂದಿವೆ. ಇನ್ನು ಗೋಡೆಯ ಕೆಳಭಾಗದಲ್ಲಿ ನೂರಾರು ದೇವತಾಮೂರ್ತಿಗಳನ್ನು ಕೆತ್ತಲಾಗಿದೆ. ಇವುಗಳಲ್ಲಿ ಮಹಾವಿಷ್ಣುವಿನ ಇಪ್ಪತ್ನಾಲ್ಕು ಮೂರ್ತಿಗಳೂ ಶೇಷನಾರಾಯಣ, ಸ್ಥಾನಕ ಅಂದರೆ ನಿಂತಸ್ಥಿತಿಯಲ್ಲಿರುವ ಬ್ರಹ್ಮ, ನರಸಿಂಹ, ನಾಟ್ಯ ಸರಸ್ವತಿ, ಲಕ್ಷ್ಮೀನಾರಾಯಣ, ಮೋಹಿನಿ, ನಾಟ್ಯಲಕ್ಷ್ಮಿ, ಶ್ರೀಕೃಷ್ಣಸತ್ಯಭಾಮೆಯರಿಂದ ಪಾರಿಜಾತಾಪಹರಣ, ಐರಾವತವನ್ನೇರಿ ಅವರನ್ನು ಬೆನ್ನಟ್ಟುತ್ತಿರುವ ಇಂದ್ರ, ಗೋವರ್ಧನಗಿರಿಧಾರಿ, ವಿಠಲ, ಯೋಗಾನರಸಿಂಹ, ಧ್ಯಾನಸ್ಥ ಸರಸ್ವತಿ, ಕಾಳಿಂಗಮರ್ದನ, ವಾಮನ, ತ್ರಿವಿಕ್ರಮ, ಪರವಾಸುದೇವ, ನಾಟ್ಯಲಕ್ಷ್ಮಿ, ನಾಟ್ಯಗಣಪತಿ ಮೊದಲಾದ ವಿಗ್ರಹಗಳೂ ಕಂಡುಬರುತ್ತವೆ. ಈ ಶಿಲ್ಪಗಳ ಸಾಲಿನಲ್ಲಿ ದೇವಾನುದೇವತೆಗಳೇ ಅಲ್ಲದೆ ವಾದ್ಯಗಾರರು, ದರ್ಪಣ ಸುಂದರಿ, ವಿಷಕನ್ಯೆ ಮತ್ತವಳ ಸಹಚರ, ಶುಕಭಾಷಿಣಿ, ಮಿಥುನ ಶಿಲ್ಪಗಳು ಮೊದಲಾದವೂ ಕಂಡುಬರುತ್ತವೆ. ಮೇಲುಸೂರಿನ ಅಂಚಿನಲ್ಲೂ ಕೈಪಿಡಿಯ ಗೋಡೆಯ ಮೇಲೆ ಬಳ್ಳಿವಿನ್ಯಾಸಗಳ ನಡುವೆ ಅಲ್ಲಲ್ಲಿ ಕೀರ್ತಿಮುಖಗಳನ್ನು ರೂಪಿಸಿ ಯಕ್ಷಮೂರ್ತಿಗಳನ್ನಿರಿಸಿದೆ.

ಹೊಯ್ಸಳಶಿಲ್ಪದ ಅಭ್ಯಾಸಿಗಳಿಗಂತೂ ಹೊಸಹೊಳಲಿನ ದೇವಾಲಯ ಅಪೂರ್ವನಿಧಿಯಿದ್ದಂತೆಯೇ ಸರಿ. ಹೊಯ್ಸಳ ವಾಸ್ತುಶಿಲ್ಪದ ವೈಶಿಷ್ಟ್ಯಗಳನ್ನೆಲ್ಲ ಒಳಗೊಂಡಿರುವ ಈ ಶಿಲ್ಪಗಳೂ ಅವುಗಳ ಉಡುಗೆತೊಡುಗೆಗಳೂ ಕಾಲಾಂತರದ ಸವೆತ ನವೆತಗಳನ್ನೂ ಕಿಡಿಗೇಡಿಗಳ ಕುಚೇಷ್ಟೆಗಳನ್ನೂ ಸಹಿಸಿಕೊಂಡು ಉಳಿದುಬಂದಿರುವುದೇ ಒಂದು ಅಚ್ಚರಿ. ಮಂಡ್ಯ, ಮೈಸೂರು, ಹಾಸನ ಮೊದಲಾದ ಕೇಂದ್ರಗಳಿಂದ ಇಲ್ಲಿಗೆ ರಸ್ತೆಮಾರ್ಗವಾಗಿ ಸುಲಭವಾಗಿ ತಲುಪಬಹುದಾಗಿದ್ದು ನಿಮ್ಮ ಪ್ರವಾಸವನ್ನು ಸೂಕ್ತವಾಗಿ ಹೊಂದಿಸಿಕೊಳ್ಳಬಹುದು.

**(ಸೌಜನ್ಯ: ಆಕಾಶವಾಣಿ, ಮೈಸೂರು)**

# ಅನಂತಯಾನ

**ನಿರೂಪಣೆ : ಟಿ.ಎಸ್. ಗೋಪಾಲ್** **ಅಧ್ಯಾಯ- 19**

## ಹಾಲು ಕುಡಿದ ಹುಡುಗ

ಹುಬ್ಬಳ್ಳಿಯ ರೈಲ್ವೆ ಕಾಲನಿಯ ಸಾಲುಮನೆಯೊಂದರಲ್ಲಿ ಬೆಳೆದ ಅನಂತ ಅಕ್ಕಪಕ್ಕದಲ್ಲಿ ವಾಸವಿದ್ದ ರೈಲ್ವೆ ಉದ್ಯೋಗಿಗಳ ಮಕ್ಕಳೊಡನೆ ಆಟಪಾಟಗಳಲ್ಲಿ ತೊಡಗಿರುತ್ತಿದ್ದ. ಮೊದಮೊದಲು ತನ್ನ ತಾಯಿತಂದೆ ಮನೆಯಲ್ಲಿ ಮಾತನಾಡಿಕೊಳ್ಳುತ್ತಿದ್ದ ತೆಲುಗುಭಾಷೆಯ ಪದಗಳಲ್ಲೇ ಸಂಭಾಷಿಸುತ್ತಿದ್ದ. ಯಾರಾದರೂ 'ನಿನ್ನ ಹೆಸರೇನೋ?' ಎಂದು ಕೇಳಿದರೆ, ಸ್ಲೇಟಿನ ಮೇಲೋ ಕಾಗದದಲ್ಲೋ ಹುಡುಗನ ಚಿತ್ರವೊಂದನ್ನು ಬರೆದು 'ಇದಿ... ಅನಂತಕುಮಾಽಽಽರ್' ಎಂದು ರಾಗವಾಗಿ ಹೇಳುತ್ತಿದ್ದ!

೧೯೬೦ರ ದಶಕ. ಎಂ.ಟಿ.ಎಸ್. ಕಾಲನಿಯಲ್ಲಿ ರೈಲ್ವೆ ಇಲಾಖೆ ತೆರೆದಿದ್ದ ಪ್ರಾಥಮಿಕ ಶಾಲೆಗೆ ಸೇರಿದ ಮೊದಲ ತಂಡದ ಮಕ್ಕಳಲ್ಲಿ ಅನಂತಕುಮಾರನೂ ಒಬ್ಬ. ಶಾಲೆಯ ಮೊದಲ ಉಪಾಧ್ಯಾಯಿನಿಯಾಗಿ ಸೇರಿದವರು ಪ್ರಿಸಿಲ್ಲಾ ನಡಗಡ್ಡಿ. ಇಡೀ ಶಾಲೆಗೆ ಆಗ ಅವರೊಬ್ಬರೇ ಶಿಕ್ಷಕಿ. ಆಮೇಲೆ ಶ್ರೀಮತಿ ಅರಳಿಕಟ್ಟಿಯವರೂ ಉಪಾಧ್ಯಾಯಿನಿಯಾಗಿ ಬಂದರು. ಬಲುಬೇಗ ಶಾಲೆಯ ಮಕ್ಕಳಿಗೆಲ್ಲ ಇಬ್ಬರು ಶಿಕ್ಷಕಿಯರೂ ಪ್ರೀತಿಪಾತ್ರರಾದರು. ಎಂ.ಟಿ.ಎಸ್. ಕಾಲನಿಯೇ ಒಂದು ದೊಡ್ಡ ಕುಟುಂಬದಂತಿತ್ತು. ಹೀಗಾಗಿ ಈ ಉಪಾಧ್ಯಾಯಿನಿಯರು ಇಡಿಯ ಕಾಲನಿಯ ಅಕ್ಕರೆಯ ಮಡಿಲಲ್ಲಿ ಸೇರಿಕೊಳ್ಳಲು ತಡವಾಗಲಿಲ್ಲ.

ಕಾಲನಿಯ ಚಟುವಟಿಕೆಗಳ ನೇತೃತ್ವ ವಹಿಸಿದ ಗಿರಿಜಾ ಶಾಸ್ತ್ರಿಯವರಂತೂ ಶಿಕ್ಷಕಿ ನಡಗಡ್ಡಿ ಹಾಗೂ ಅರಳಿಕಟ್ಟಿಯವರ ಕ್ರಿಯಾಶೀಲತೆಗೆ ಬೆಂಬಲವಾಗಿ ನಿಂತರು. ಶಾಲೆಯ ಪಠ್ಯೇತರ ಚಟುವಟಿಕೆಗಳಿಗೆಲ್ಲ ಗಿರಿಜಾರವರ ಸಹಕಾರ ಸದಾ ಸಿದ್ಧ. ಇನ್ನು ಗಿರಿಜಾರವರ ಮಗ ಅನಂತನನ್ನು ಕೇಳಬೇಕೆ? ನಡಗಡ್ಡಿ ಟೀಚರ್ ಹೋದಲ್ಲಿ ಬಂದಲ್ಲಿ ಅವನೂ ಇರಲೇಬೇಕು. ಶಾಲೆ ಮುಗಿಸಿ ಟೀಚರ್ ಮನೆಗೆ ಹೊರಟಾಗ ಅವರ ಕೈಚೀಲವನ್ನೋ ಕೊಡೆಯನ್ನೋ ಹೊತ್ತು ಅವರ ಮನೆಯವರೆಗೂ ತಲುಪಿಸಿ ಬರುವ ಹೊಣೆಗಾರಿಕೆಯನ್ನು ಅನಂತ ಅಧಿಕೃತವಾಗಿ ವಹಿಸಿಕೊಂಡುಬಿಟ್ಟಿದ್ದ! ಅವನ ಜೊತೆಗೆ ಇನ್ನಷ್ಟು ಮಕ್ಕಳ ಸಾಲುಮೆರವಣಿಗೆ. ಹುಬ್ಬಳ್ಳಿಯ ರಸ್ತೆಯ ಟ್ರಾಫಿಕ್ ಗಜಿಬಿಜಿಯಲ್ಲಿ ಮಕ್ಕಳು ವಾಪಸು ತಂತಮ್ಮ ಮನೆ ಸೇರಬೇಕಲ್ಲ ಎಂಬ ಆತಂಕ ಟೀಚರಿಗೆ. ಟೀಚರ್ ಅವರನ್ನು ಸುರಕ್ಷಿತವಾಗಿ ಮನೆ ತಲುಪಿಸಿದ ಹಿರಿಯ ಜವಾಬ್ದಾರಿ ನಿರ್ವಹಿಸಿದ ಸಂತೋಷ ಮಕ್ಕಳಿಗೆ!

ಹುಡುಗನಿಗೆ ಆಟಗಳಲ್ಲಿ ಇದ್ದಷ್ಟೇ ಆಸಕ್ತಿ ಅಧ್ಯಯನದಲ್ಲೂ ಇದ್ದಿತ್ತು. ಕೈಗೆ ಸಿಕ್ಕಿದ್ದನ್ನೆಲ್ಲ ಓದುವುದು. ಹುಬ್ಬಳ್ಳಿಯ ಸಾರ್ವಜನಿಕ ಗ್ರಂಥಾಲಯಕ್ಕೆ ಹೋಗಿ ಕೈಗೆ ಸಿಕ್ಕಿದ ಪುಸ್ತಕ ಓದಲು ಕುಳಿತನೆಂದರೆ ಮನೆಗೆ ಹಿಂತಿರುಗುವ ವಿಷಯವನ್ನೂ ಮರೆತ ಹಾಗೆಯೇ. ಮಗ ಎಷ್ಟು ಹೊತ್ತಿಗೂ ಬರಲಿಲ್ಲವೆಂದರೆ ಗ್ರಂಥಾಲಯದಲ್ಲಿ ಕುಳಿತಿದ್ದಾನೆ ಎಂದೇ ಅರ್ಥ. ತಾಯಿ ಯಾರನ್ನಾದರೂ ಕಳುಹಿಸಿ ಅವನನ್ನು ಎಬ್ಬಿಸಿಕೊಂಡು ಕರೆತರಬೇಕಾಗಿತ್ತು.

ಒಮ್ಮೆ ಪಕ್ಕದ ಮನೆಗೆ ಹೋಗಿ ಒಂದು ಲೋಟ ಹಾಲು ತರುವಂತೆ ಗಿರಿಜಾರವರು ಅನಂತನಿಗೆ ಹೇಳಿ ಕಳುಹಿಸಿದರು. ಹುಡುಗ ನೆರೆಮನೆಗೆ ಹೋಗಿ ಹಾಲು ಕೊಡುವಂತೆ ಕೇಳಿದ. 'ತರ್ತೀನಿ, ಕುಳಿತಿರು' ಎಂದ ನೆರೆಮನೆಯಾಕೆ ಒಳಗೆ ಹೋದರು. ಅನಂತ ಅಲ್ಲಿಯೇ ಇದ್ದ ವಾರಪತ್ರಿಕೆ ಎತ್ತಿಕೊಂಡು ಓದತೊಡಗಿದ. ಆಕೆ ಲೋಟದಲ್ಲಿ ಹಾಲು ತಂದಿಟ್ಟು ತೆಗೆದುಕೊಂಡು ಹೋಗುವಂತೆ ಹೇಳಿದರು. ಎಷ್ಟೋ ಹೊತ್ತಿನ ನಂತರ ಆ ಮನೆಯಾಕೆ ಹೊರಗೆ ಬಂದು ನೋಡುತ್ತಾಳೆ, ಅನಂತ ಇನ್ನೂ ಪತ್ರಿಕೆ ಹಿಡಿದು ಕುಳಿತೇ ಇದ್ದಾನೆ! ಪಕ್ಕದಲ್ಲಿಟ್ಟ ಹಾಲಿನ ಲೋಟ ಖಾಲಿಯಾಗಿದೆ! 'ಇದೇನೋ ಅಮ್ಮನಿಗೆ ಹಾಲು ಬೇಕು ಅಂತ ಕೇಳಿ ಇಲ್ಲೇ ಕುಳಿತಿದ್ದೀಯಲ್ಲ. ಹಾಲು ಏನಾಯಿತೋ?' ಎಂದು ಕೇಳಿದಾಗ ಅನಂತ ಪೆಚ್ಚುಪೆಚ್ಚಾಗಿ ಅವರನ್ನೇ ನೋಡಿದ. ಪತ್ರಿಕೆ ಓದುವುದರಲ್ಲಿ ಲೀನನಾಗಿದ್ದ ಅವನಿಗೆ ತಾನೇ ಹಾಲು ಕುಡಿದುಬಿಟ್ಟದ್ದು ಆಗ ನೆನಪಾಯಿತು!

ಅನಂತ ಎಷ್ಟು ಬುದ್ಧಿವಂತನೋ ಅಷ್ಟೇ ತುಂಟ. ಪಠ್ಯೇತರ ಚಟುವಟಿಕೆಗಳಲ್ಲಿ ಅಷ್ಟೇ ಮುಂದು. ಅನಂತಕುಮಾರ ಇದ್ದಾನೆಂದರೆ ಸ್ಕೌಟ್ ಶಿಬಿರಗಳಲ್ಲಿ ಎಂ ಟಿ ಎಸ್ ಕಾಲನಿ ಶಾಲೆಗೇ ಮೊದಲ ಪಾರಿತೋಷಕ ಎಂಬುದು ತೀರ್ಮಾನವಾದ ಹಾಗೆಯೇ. ಹಾಗೆಂದು ಅನಂತನ ತುಂಟತನವೇನೂ ಕಡಿಮೆಯಲ್ಲ. ಹೈದರಾಬಾದಿನ ಸ್ಕೌಟ್ ಶಿಬಿರಕ್ಕೆ ಮಕ್ಕಳನ್ನು ಕರೆದೊಯ್ಯುವಾಗಲೂ ಹಿಂತಿರುಗುವಾಗಲೂ ಇವನ ಚೇಷ್ಟೆಗಳನ್ನು ತಡೆಯುವುದೇ ಕಷ್ಟವಾಗಿತ್ತು. ಹುಡುಗಿಯರ ಚಪ್ಪಲಿಗಳನ್ನು ಅಡಗಿಸುವುದೇನು, ಗೋಳುಹೊಯ್ದುಕೊಳ್ಳುವುದೇನು? ಅನಂತನ ಚೇಷ್ಟೆಗಳನ್ನು ನಿಯಂತ್ರಿಸಲು ನಡಗಡ್ಡಿಯವರು ದಾರಿಗಾಣದೆ ಅವನಿಗೆಂದೇ ಪ್ರತ್ಯೇಕ ಕಾನೂನು ಹೊರಡಿಸಬೇಕಾಯಿತು- ಪ್ರಯಾಣದುದ್ದಕ್ಕೂ ಅವನು ಟೀಚರರ ಕಣ್ಣಮುಂದೆಯೇ ಕುಳಿತಿರತಕ್ಕದ್ದು!

ವೈದ್ಯಕೀಯ ವ್ಯಾಸಂಗಕ್ಕಾಗಿ 1967 ರಲ್ಲಿ ಹುಬ್ಬಳ್ಳಿಗೆ ಬಂದ ಶ್ರೀ ವಾಮನಾಚಾರ್ಯರನ್ನು ಹುಬ್ಬಳ್ಳಿ ನಗರದ ಸಂಘದ ಕಾರ್ಯವಾಹರಾಗಿ ನೇಮಿಸಲಾಗಿತ್ತು. ಹೀಗಾಗಿ ವಾಮನಾಚಾರ್ಯರು ಹುಬ್ಬಳ್ಳಿಯ ಬೇರೆ ಬೇರೆ ಬಡಾವಣೆಗಳಲ್ಲಿದ್ದ ಸಂಘದ ಶಾಖೆಗಳ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು. ಎಂ.ಟಿ.ಎಸ್ ಕಾಲೋನಿಯಲ್ಲಿಯೂ ಒಂದು ಶಾಖೆ ಇತ್ತು. ಅನಂತಕುಮಾರ್ ತನ್ನ ತಂದೆತಾಯಿಯರೊಡನೆ ವಾಸವಾಗಿದ್ದ ಮನೆಯ ಎದುರಿನ ಬಯಲಿನಲ್ಲೇ ಈ ಶಾಖೆ ನಡೆಯುತ್ತಿತ್ತು. ಹೀಗಾಗಿ, ವಾಮನಾಚಾರ್ಯರಿಗೆ ಅನಂತಕುಮಾರನ ಮನೆಯ ಹಿರಿಯರ ಪರಿಚಯ ಬೆಳೆಯಿತು. ವಾಮನಾಚಾರ್ಯರು ಶಾಖೆಗೆ ಬಂದಾಗಲೆಲ್ಲ ನಾರಾಯಣಶಾಸ್ತ್ರಿಯವರನ್ನೂ ಗಿರಿಜಾರನ್ನೂ ಮಾತನಾಡಿಸಲು ಅವಕಾಶವಾಗುತ್ತಿತ್ತು. ಶಾಸ್ತ್ರಿಯವರ ಮನೆ ತುಂಬ ಚಿಕ್ಕದು. ಸಾಮಾನ್ಯ ಹಂಚಿನ ಮನೆಯ ಮಧ್ಯದಲ್ಲಿ ಎತ್ತರದ ಒಂದು ಮೋಟುಗೋಡೆ. ಹೊರಮನೆಯ ಮಂಚದ ಮೇಲೆ ಕುಳಿತು ವಾಮನಾಚಾರ್ಯರು ಶಾಸ್ತ್ರಿಯವರನ್ನು ಮಾತನಾಡಿಸಿ ಹೋಗುತ್ತಿದ್ದರು.

ಅತ್ಯಂತ ಸರಳತೆ, ಸಜ್ಜನಿಕೆಯುಳ್ಳವರಾಗಿದ್ದ ಶಾಸ್ತ್ರಿ ದಂಪತಿಯವರೊಡನೆ ವಾಮನಾಚಾರ್ಯರು ಸಂಘದ ವಿಚಾರವಾಗಿ ಮಾತನಾಡಲು ತೊಡಗುವಾಗ ಮಾತ್ರ ಅವರು ವಿರೋಧಿಸದಿದ್ದರೂ ಮಾತನಾಡಲು ಹಿಂಜರಿಯುತ್ತಿದ್ದರು. ಆ ಕಾಲದಲ್ಲಿ ಸರಕಾರಿ ನೌಕರಿಯಲ್ಲಿದ್ದವರಿಗೆ ಆರೆಸ್ಸೆಸ್ ಸಂಪರ್ಕದಿಂದ ತಮ್ಮ ಉದ್ಯೋಗಕ್ಕೆ ತೊಂದರೆ ಉಂಟಾಗಬಹುದೆಂಬ ಒಂದು ರೀತಿಯ ಅಂಜಿಕೆ ಇರುತ್ತಿದ್ದುದೇ ಇದಕ್ಕೆ ಕಾರಣವೆಂದು ತೋರುತ್ತದೆ.


ಆಗಿನ್ನೂ ಅನಂತಕುಮಾರ ಚಿಕ್ಕ ಹುಡುಗ. ಅವನನ್ನು ಮೊದಲು ವಾಮನಾಚಾರ್ಯರು ಕಾಣುವಾಗ ಅವನಿನ್ನೂ ಏಳನೆಯ ತರಗತಿಯಲ್ಲೋ ಎಂಟನೇ ತರಗತಿಯಲ್ಲೋ ಓದುತ್ತಿದ್ದಿರಬೇಕು.

ಅವನೂ ಶಾಖೆಗೆ ಸೇರಿಕೊಂಡಿದ್ದ. ಆದರೆ, ಸಂಘದ ಶಾಖೆಗಳಲ್ಲಿ ಅವನ ಹಾಜರಿ ನಿಯಮಿತವಾಗಿರುತ್ತಿತ್ತು ಎಂದು ಹೇಳುವಂತಿಲ್ಲ. ವಯೋಸಹಜ ಹುಡುಗಾಟಿಕೆಯಿಂದಾಗಿ ಅನಂತಕುಮಾರ ಸಂಘದ ಧ್ಯೇಯೋದ್ದೇಶಗಳನ್ನಾಗಲಿ ಚಟುವಟಿಕೆಗಳನ್ನಾಗಲಿ ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಬಾಲ್ಯದಲ್ಲಿ ತುಂಬ ಚುರುಕು ಮತ್ತು ತುಂಟ ಸ್ವಭಾವದವನಾಗಿದ್ದ ಅನಂತಕುಮಾರ್ ಕೆಲವೊಮ್ಮೆ ಶಾಖೆಗೆ ಬಂದರೂ ತನ್ನ ಚೇಷ್ಟೆಯಿಂದ ಜೊತೆಯ ಮಕ್ಕಳ ಗಮನವನ್ನು ಶಾಖೆಯ ಚಟುವಟಿಕೆಯಿಂದ ಬೇರೆಡೆ ಸೆಳೆಯಲು ಯತ್ನಿಸುತ್ತಿದ್ದುದೂ ಉಂಟು. ಅನಂತನ ಗೈರುಹಾಜರಿ ಮತ್ತು ಚೇಷ್ಟೆಗಳ ಬಗ್ಗೆ ಉಳಿದ ಮಕ್ಕಳು ಆಗಾಗ್ಗೆ ದೂರು ತಂದರೂ ಮುಖ್ಯಶಿಕ್ಷಕರಾಗಲಿ, ವಾಮನಾಚಾರ್ಯರಾಗಲಿ ಅಂತಹ ತುಂಟಾಟವೆಲ್ಲ ಬಾಲ್ಯದಲ್ಲಿ ಸಹಜ ಎಂದು ಉಪೇಕ್ಷೆ ಮಾಡುತ್ತಿದ್ದರು.




**ರಾಮಲಲ್ಲಾ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಭಾಗವಹಿಸಲು ಅಯೋಧ್ಯೆಗೆ ಆಗಮಿಸುವ ಭಕ್ತರಿಗೆ ಮುಂದಿನ ಒಂದು ತಿಂಗಳ ಕಾಲ ಊಟ ಉಪಾಹಾರಗಳನ್ನು ಉಚಿತವಾಗಿ ನೀಡಲು ಅದಮ್ಯಚೇತನದ ಅಡುಗೆ ಸಾಮಗ್ರಿಗಳನ್ನು ಹೊತ್ತ ವಾಹನಗಳು ಅಯೋಧ್ಯೆಗೆ ತೆರಳಿವೆ.**

# ವೃತ್ತಿ ಶಿಕ್ಷಣ - ಕ್ಯಾಪಿಟೇಷನ್ ಪಿಡುಗು




**ಅಧ್ಯಾಯ-1**

"ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ದುರ್ವ್ಯಾಪಾರದ ಮಟ್ಟಕ್ಕೆ ಮುಟ್ಟಿದೆ. ಸೀಟು ಶುಲ್ಕ ಅಥವಾ ಪ್ರವೇಶ ಶುಲ್ಕವನ್ನು ನಿರ್ದಾಕ್ಷಿಣ್ಯವಾಗಿ ರದ್ದುಗೊಳಿಸಲಾಗುವುದು. ಸಂವಿಧಾನದಲ್ಲಿ ಗೊತ್ತುಪಡಿಸಿರುವ ಮೀಸಲು ಪದ್ಧತಿಯ ಹೊರತಾಗಿ ಉಳಿದ ವರ್ಗದವರಿಗೆಲ್ಲಾ ಪ್ರವೇಶಕ್ಕೆ ಅರ್ಹತೆಯ ಆಧಾರ. ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ವಿಶೇಷ ಪ್ರಾಶಸ್ತ್ಯ. ಸಾಮಾಜಿಕ ನ್ಯಾಯವನ್ನು ಬಲಿಕೊಡದಂತೆ ಪ್ರವೇಶದ ವ್ಯವಸ್ಥೆ. ಅಕ್ರಮವಾಗಿ ಹಣಗಳಿಕೆಯ ಮಾಧ್ಯಮಗಳಾಗಿರುವ, ಇದ್ದಕ್ಕಿದ್ದಂತೆ ತಲೆ ಎತ್ತುವ ತಾಂತ್ರಿಕ ವಿದ್ಯಾಲಯಗಳಿಗೆ ಮನ್ನಣೆ ಕೊಡಲಾಗುವುದಿಲ್ಲ. ಈಗಾಗಲೇ ಸ್ಥಾಪಿತವಾಗಿರುವ ತಾಂತ್ರಿಕ ವಿದ್ಯಾಲಯಗಳು ವಿಶ್ವವಿದ್ಯಾನಿಲಯಗಳ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಎಚ್ಚರ ವಹಿಸಲಾಗುವುದು." (ಪು-7, ಜನತಾ ಪಕ್ಷ - ಕರ್ನಾಟಕ ಕ್ರಾಂತಿರಂಗ ಚುನಾವಣೆ ಪ್ರಣಾಳಿಕೆ,1983)

ಕ್ಯಾಪಿಟೇಷನ್ ಪಿಡುಗಿನಿಂದ ವೃತ್ತಿ ಶಿಕ್ಷಣವನ್ನು ಮುಕ್ತಗೊಳಿಸುವ ಮೌಲ್ಯಾಧಾರಿತ ರಾಜಕಾರಣವನ್ನು ನಡೆಸುವ ಪಣತೊಟ್ಟು ಅಧಿಕಾರಕ್ಕೆ ಬಂದ ಮಾನ್ಯ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು, ಕೇವಲ ನಾಲ್ಕು ವರ್ಷಗಳ ಅಧಿಕಾರಾವಧಿಯಲ್ಲಿ ತಮ್ಮ 'ಸಿದ್ಧಾಂತ'ಗಳನ್ನು ಆಮೂಲಾಗ್ರವಾಗಿ ಬದಲಿಸಿದ್ದಾರೆ.

"ಕಾಂಗ್ರೆಸ್ ಪಕ್ಷದ ಸರಕಾರಕ್ಕಿಂತ ನೀವು ಭಿನ್ನರಾಗುತ್ತೀರೆಂದು ಜನ ನಿಮಗೆ ಮತ ನೀಡಿದರು. ನೀವೂ ವಚನಭಂಗ ಮಾಡಿ "ಏಕೆ ಅವರ ಹಾದಿ ಹಿಡಿದಿರಿ" ಎಂಬ ವರದಿಗಾರರ ಪ್ರಶ್ನೆಗೆ ಶ್ರೀ ಹೆಗಡೆ ಉತ್ತರಿಸಿದರು: "ನಾವು ಯಾವ ವಚನವನ್ನೂ ಕೊಟ್ಟಿಲ್ಲ, ಬೇಕಾದರೆ ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆ ತೆಗೆದು ನೋಡಿರಿ". 1985ರ ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಕ್ಯಾಪಿಟೇಷನ್ ನಿಷೇಧದ ಮಾತು ಇಲ್ಲ. ತಮ್ಮ ಅಧಿಕಾರಾವಧಿಯ ಮೊದಲ 35 ತಿಂಗಳುಗಳಲ್ಲಿ ಕ್ಯಾಪಿಟೇಷನ್ ಆಧಾರಿತ 5 ವೈದ್ಯಕೀಯ ಕಾಲೇಜುಗಳು, 5 ಇಂಜಿನಿಯರಿಂಗ್ ಕಾಲೇಜುಗಳು, 103 ಪಾಲಿಟೆಕ್ನಿಕ್‌ಗಳನ್ನು ಮಂಜೂರು ಮಾಡಿ ವಿಶ್ವ ದಾಖಲೆಗೈದಿರುವ ಅವರ ಈಗಿನ ಪ್ರಣಾಳಿಕೆ: "ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡಿ ಶಿಕ್ಷಣ ನೀಡುವಲ್ಲಿ ನಾವು ಯಾವ ಅಪರಾಧವನ್ನೂ ಮಾಡಿಲ್ಲ, ಉಳ್ಳವರು ಕೊಡುತ್ತಾರೆ. ಕೊಟ್ಟರೇನು ತಪ್ಪು? ಶುಲ್ಕ ನೀಡುವುದು ತಪ್ಪು ಎಂದರೆ ಕಪ್ಪು ಹಣ ಹೊರಬರಲು ಬೇರರ್ ಬಾಂಡ್‌ಗಳನ್ನು ಜಾರಿಗೆ ತಂದದ್ದೂ ತಪ್ಪೇ. ಈ ಕಾಲೇಜುಗಳು ನಿರುದ್ಯೋಗಿ ಪದವೀಧರರನ್ನು ಸೃಷ್ಟಿಸುತ್ತದೆ ಎನ್ನುವುದು ತಪ್ಪು. ಏಕೆಂದರೆ, ಇಲ್ಲಿ ತರಬೇತಾದವರು ಇತರೆ ದೇಶಗಳಿಗೆ ಹೋಗಿ ಹಣ ಸಂಪಾದಿಸಬಹುದಲ್ಲ? ನೋಡಿ, ಕೇರಳದವರು ಹೇಗೆ ಗಲ್ಫ್ ಹಣ ಬಾಚುತ್ತಿದ್ದಾರೆ"? ಇತ್ತೀಚೆಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹಾಸನದ ಸಮಾರಂಭವೊಂದರಲ್ಲಿ ರಾಜ್ಯದಲ್ಲಿ ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ಆರಂಭಿಸಲು (ಕ್ಯಾಪಿಟೇಶನ್ ಆಧಾರಿತ) ಅನುಮತಿ ಕೊಡುವ ಕ್ರಾಂತಿಕಾರಿ ಮಾತುಗಳನ್ನಾಡಿದ್ದಾರೆ. ಈ "ಜ್ಞಾನ ದೇಗುಲ"ಗಳಿಂದ ತಯಾರಾಗುವ ಪ್ರತಿಭಾನ್ವಿತರನ್ನು ರಫ್ತು ಮಾಡುವ (Talent Export) ಹೊಸ ಉದ್ದೇಶದ ವ್ಯಾಪಾರೀ ಆಯಾಮವನ್ನು ಕರ್ನಾಟಕ-ಭಾರತೀಯ ಜನತೆಯ ಮುಂದಿಟ್ಟ ಅವರ ಚಾಣಾಕ್ಷಮತಿಗೇನೆನ್ನುವುದು? ಅಧಿಕಾರ ಭ್ರಷ್ಟಗೊಳಿಸುತ್ತದೆ (Power corrupts) ಎನ್ನುವುದಕ್ಕೆ ಮೇಲಿನದು ತೀರಾ ಇತ್ತೀಚಿನ ಉದಾಹರಣೆ ಮಾತ್ರ.

ಕ್ಯಾಪಿಟೇಶನ್ ಪಿಡುಗಿನ ಕರಿಛಾಯೆಯಲ್ಲಿ ರಾಜ್ಯದ ವೃತ್ತಿ ಶಿಕ್ಷಣ ಬಳಲುತ್ತಿದೆ. ರಾಜ್ಯದ ಸಮತೋಲನದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಪೂರಕವಾಗುವಂತೆ ವೃತ್ತಿ ಶಿಕ್ಷಣದ ಆಮೂಲಾಗ್ರ ಯೋಜನೆಯ ಅಗತ್ಯವಿದೆ. ಕೈಗಾರಿಕೆ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ಅವಶ್ಯಕ ಮತ್ತು ಸಹಾಯಕವಾಗುವಂತಹ ತಾಂತ್ರಿಕ ಮಾನವಶಕ್ತಿ ತಯಾರಾಗುವಂತೆ ಈ ರೀತಿಯ ಶಿಕ್ಷಣದ ಉದ್ದೇಶ ಮತ್ತು ವ್ಯಾಪ್ತಿಗಳಿರಬೇಕು. ಇದೇ ಹಿನ್ನೆಲೆಯಲ್ಲಿ, ಕರ್ನಾಟಕದಲ್ಲಿ ಕೂಡಾ ವೃತ್ತಿ ಶಿಕ್ಷಣದ ಬೆಳವಣಿಗೆಯಾಗುತ್ತಾ ಬಂದಿದೆ. 1970ರಲ್ಲಿ ಖಾಸಗೀ ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಆರಂಭಗೊಂಡವು. 1959ರಲ್ಲೇ, ಡಾ|| ಟಿ.ಎಂ.ಎ. ಪೈಗಳಿಂದ ಸ್ಥಾಪಿಸಲ್ಪಟ್ಟ ಕಸ್ತೂರಬಾ ವೈದ್ಯಕೀಯ ಕ್ಯಾಪಿಟೇಶನ್ ಶುಲ್ಕದ ಬೀಜ ನೆಟ್ಟರೂ ಅದು ಚಿಗುರಿದ್ದು 1970-71 ರಿಂದ 1982-83 ರವರೆಗೆ. ಅನಂತರದ 3 ವರ್ಷಗಳಲ್ಲಿ ರಾಜಕೀಯ ಭ್ರಷ್ಟಾಚಾರದ ಜಾತಿ ಗುಂಪುಗಳ ತುಷ್ಟೀಕರಣದ ವಿಶೇಷ ಸಾಧನವಾಗಿ ಅದು ಬೆಳೆದು ನಿಂತು ವೃತ್ತಿ ಶಿಕ್ಷಣವನ್ನು ಹದಗೆಡಿಸಿದೆ. (ಮುಂದುವರಿಯುವುದು)

(ಪುಟ 1 ರಿಂದ)

## ದೇವಾಲಯ ವಾಸ್ತುಶಿಲ್ಪದ ಹಿರಿಮೆ : ವಿಚಾರ ಸಂಕಿರಣ



ಹಾಗೂ ಸಮಾಜದ ಎಲ್ಲ ವಲಯಗಳ ಆರೋಗ್ಯಕಾರಿ ಚಟುವಟಿಕೆಗಳನ್ನು ಹೇಗೆ ಕಾಯ್ದುಕೊಂಡು ಬರಬೇಕು ಎಂಬುದರ ವೈಜ್ಞಾನಿಕ ನಿರೂಪಣೆಯಾಗಿದೆ ಎಂದರು. ಮನುಕುಲದ ಅಭಿವೃದ್ಧಿಯು ಬಹು ಆಯಾಮಗಳನ್ನು ಹೊಂದಿದೆ. ದೇವಾಲಯಗಳ ನಿರ್ಮಾಣವು ಕಲೆಯೂ ಹೌದು; ವಿಜ್ಞಾನವೂ ಹೌದು. ಇವು ಕೇವಲ ಭೌತಿಕ ನಿರ್ಮಾಣವಾಗಿರದೇ, ಅವುಗಳಲ್ಲಿ ವಾಸಿಸುವವರ ಆರೋಗ್ಯ, ಸಂತಸ ಹಾಗೂ ಸಾಮಾಜಿಕ ಸಾಮರಸ್ಯಗಳನ್ನು ಗಮನದಲ್ಲಿರಿಸಿಕೊಂಡು ನಿರ್ಮಿಸಲಾದ ರಚನೆಗಳು ಎಂದೂ ಅವರು ತಿಳಿಸಿದರು. ಧಾರವಾಡದ ಐಐಟಿ ಪ್ರಾಧ್ಯಾಪಕ ಡಾ. ರಮೇಶ್ ನಾಯಕ, 'ಭಾರತೀಯ ದೇವಾಲಯಗಳಲ್ಲಿ ವಸ್ತುವಿಜ್ಞಾನ ಮತ್ತು ನಿರ್ಮಾಣ ತಂತ್ರಜ್ಞಾನ' ಎಂಬ ವಿಷಯದ ಮೇಲೆ ಉಪನ್ಯಾಸ ನೀಡುತ್ತ, ದೇವಾಲಯಗಳ ರಚನಾ ವಿನ್ಯಾಸದ ವೈಜ್ಞಾನಿಕ ಸಂಶೋಧನೆ ಇನ್ನೂ ವ್ಯಾಪಕವಾಗಿ ನಡೆಯಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ವಿದೇಶಗಳಲ್ಲಿ ಪುರಾತನ ಕಟ್ಟಡಗಳನ್ನು ನವೀಕರಣ ಮಾಡುವಾಗ ಅವುಗಳ ಮೂಲ ರಚನೆಯ ಕ್ರಮಗಳನ್ನೇ ಅನುಸರಿಸಲಾಗುತ್ತದೆ. ಆದರೆ, ಭಾರತದ ಹಲವೆಡೆಗಳಲ್ಲಿ ದೇವಾಲಯದ ಗೋಡೆಯಲ್ಲಿ ಬಿರುಕು ಕಾಣಿಸಿಕೊಂಡರೆ ಅದರ ಮೂಲ ಸಂರಚನೆಯನ್ನು ಗಮನದಲ್ಲಿರಿಸಿಕೊಂಡು ದುರಸ್ತಿ ಮಾಡುವುದಿಲ್ಲ. ಬದಲಾಗಿ ಸಿಮೆಂಟ್ ಬಳಸಿ ದುರಸ್ತಿ ಮಾಡುತ್ತಿದ್ದಾರೆ. ದೇವಾಲಯ ನಿರ್ಮಾಣದ ಹಿಂದಿನ ತಂತ್ರಜ್ಞಾನದ ಅರಿವಿನ ಕೊರತೆಯಿಂದಾಗಿ ಇಡೀ ದೇವಾಲಯಗಳನ್ನು ಶಾಶ್ವತವಾಗಿ ಕಳೆದುಕೊಂಡಂತಹ ನಿದರ್ಶನಗಳೂ ಇವೆ ಎಂದರು. ಭಾರತೀಯ ಪುರಾತತ್ವ ಇಲಾಖೆಯ ಪ್ರಾದೇಶಿಕ ನಿವೃತ್ತ ನಿರ್ದೇಶಕ ಶ್ರೀ ಕೆ. ಕೆ. ಮಹಮ್ಮದ್ ಅವರು ಅಂತರ್ಜಾಲದ ಮೂಲಕ ಮಾತನಾಡಿ, ದೇಶದಲ್ಲಿರುವ ಐತಿಹಾಸಿಕ ಸ್ಮಾರಕಗಳ ಪುನರ್ನಿರ್ಮಾಣ ಮತ್ತು ರಕ್ಷಣೆಯ ಕಾರ್ಯದಲ್ಲಿ ಇಲಾಖೆಯು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದು ಹೇಳಿದರು. ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ವ್ಯಾಪಿಸಿಕೊಂಡಿರುವ ಚಂಬಲ್ ಕಣಿವೆಯಲ್ಲಿ ಬಟೇಶ್ವರ ದೇವಾಲಯ ಸಂಕೀರ್ಣದ ಪುನರ್ನಿರ್ಮಾಣ ಕಾರ್ಯದಲ್ಲಿ ಡಕಾಯಿತರಿಂದ ದೊರೆತ ಸಹಕಾರ, ಸರಕಾರದ ನಿರ್ಲಕ್ಷ್ಯ, ವ್ಯವಸ್ಥೆ ಮುಂದೊಡ್ಡಿದ ಸಮಸ್ಯೆಗಳನ್ನು ಅವರು ಎಳೆಎಳೆಯಾಗಿ ವಿವರಿಸಿದರು. ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ.ವಿ. ಕೃಷ್ಣಭಟ್ಟರು ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. "ಉತ್ತರ ಭಾರತದ ಬಹಳಷ್ಟು ದೇವಾಲಯಗಳು ಮುಸ್ಲಿಂ ಆಕ್ರಮಣಕಾರರ ದಾಳಿಗೆ ಬಲಿಯಾಗಿ ಸಂಪೂರ್ಣ ನಾಶವಾಗಿವೆ. ದೇವಾಲಯಗಳು ಕೇವಲ ಧಾರ್ಮಿಕ ಸಂಸ್ಥೆಗಳಾಗಿರದೆ ಕಲೆ, ಸಂಸ್ಕೃತಿಗಳನ್ನು ಪೋಷಿಸುವ ಸಾಂಸ್ಕೃತಿಕ ಸಂಸ್ಥೆಗಳಾಗಿದ್ದವು. ದೇವಾಲಯಗಳ ಮಹತ್ವವನ್ನು ಯುವಜನರಿಗೆ ತಲುಪಿಸಿ ಅವರಲ್ಲಿ ಈ ಬಗ್ಗೆ ಆಸಕ್ತಿ ಮೊಳೆಯುವಂತೆ ಮಾಡುವ ಅಗತ್ಯವಿದೆ" ಎಂದು ಅವರು ಈ ಸಂದರ್ಭದಲ್ಲಿ ತಿಳಿಸಿದರು. ಅದಮ್ಯಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಭಾರತೀಯ ಜೀವನ ಪದ್ಧತಿಯನ್ನು ಪ್ರತಿಬಿಂಬಿಸುವ ದೇವಾಲಯಗಳ ವಾಸ್ತುಶಿಲ್ಪಗಳು ವಿಶೇಷ ಸಂದೇಶಗಳನ್ನು ನೀಡುತ್ತಿವೆ. ಕಳೆದ ಆರು ದಶಕಗಳಲ್ಲಿ ನಮ್ಮ ಜೀವನ ವಿಧಾನದಲ್ಲಿ ಸಂಪೂರ್ಣ ಬದಲಾವಣೆಯಾಗಿದ್ದು, ಪರಿಸರ ಮಾಲಿನ್ಯ ಹೆಚ್ಚುತ್ತಿದೆ. ಇಂತಹ ಕಾಲಘಟ್ಟದಲ್ಲಿ ನಾವು ಭಾರತೀಯ ದೇವಾಲಯಗಳ ವಾಸ್ತುಶಿಲ್ಪದಿಂದ ಪಾಠ ಕಲಿಯಬೇಕಾಗಿದೆ ಎಂದು ಅವರು ತಿಳಿಸಿದರು.

ಬಿಎಂಎಸ್ ಕಾಲೇಜ್ ಆಫ್ ಆರ್ಕಿಟೆಕ್ಚರ್ ನಿರ್ದೇಶಕಿ, ಶ್ರೀಮತಿ ಮಮತಾ ಪಿ. ರಾಜ್ ಮಾತನಾಡಿ, ಭಾರತೀಯ ದೇವಾಲಯಗಳ ವಾಸ್ತುವಿನ ಬಗ್ಗೆ ಸಂಶೋಧನೆಗಳಾಗಿವೆ. ಆದರೆ, ಬಹುತೇಕ ದೇವಾಲಯಗಳ ಇತಿಹಾಸವು ನಿಗೂಢವಾಗಿಯೇ ಉಳಿದಿದೆ ಎಂದರು. ವಿಚಾರ ಸಂಕಿರಣದ ನಿರೂಪಣೆಯನ್ನು ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಶ್ವೇತಾ ಕೆ. ಪುರೋಹಿತ ನಿರ್ವಹಿಸಿದರು. (ಸಂಪನ್ಮೂಲ ವ್ಯಕ್ತಿಗಳ ಉಪನ್ಯಾಸಗಳ ಸಂಗ್ರಹರೂಪವನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು)

# ‘ಜ್ಞಾನದ ಮಾರ್ಗದಲ್ಲಿ ಮರುಚಿಂತನೆಯ ಅಗತ್ಯ’- ತೇಜಸ್ವಿನಿ ಅನಂತಕುಮಾರ್




ಶಿಬಪುರದ ಭಾರತೀಯ ಎಂಜಿನಿಯರಿಂಗ್ ವಿಜ್ಞಾನ ಹಾಗೂ ತಾಂತ್ರಿಕ ಸಂಸ್ಥೆಯನ್ನು ಪರಿಸರ ಸ್ನೇಹಿಯನ್ನಾಗಿ ರೂಪಿಸಲಾಗುತ್ತದೆ ಎಂದು ಪಶ್ಚಿಮ ಬಂಗಾಲದ ಶಿಬಪುರದಲ್ಲಿರುವ ಭಾರತೀಯ ಎಂಜಿನಿಯರಿಂಗ್ ವಿಜ್ಞಾನ ಹಾಗೂ ತಾಂತ್ರಿಕ ಸಂಸ್ಥೆಯ ಆಡಳಿತ ಮಂಡಳಿಯ (ಐಐಇಎಸ್‌ಟಿ) ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಹೇಳಿದರು. ಐಐಇಎಸ್‌ಟಿಯ ಸಭಾಂಗಣದಲ್ಲಿ 2023ರ ಡಿ. 22ರಂದು ನಡೆದ 10ನೇ ವರ್ಷದ ಘಟಿಕೋತ್ಸವ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ನಮ್ಮ ದೇಶಕ್ಕೆ 50 ಸಾವಿರ ವರ್ಷಗಳ ಇತಿಹಾಸವಿದೆ. ಸಾಂಸ್ಕೃತಿಕ ಪರಂಪರೆ ಇದೆ. ಆದರೂ, ಪರಿಶುದ್ಧ ಪರಿಸರ ನಿರ್ಮಾಣ ಸಾಧ್ಯವಾಗುತ್ತಿಲ್ಲ. ಎಲ್ಲ ವಲಯಗಳಲ್ಲಿ ಮಾಲಿನ್ಯ ಹೆಚ್ಚುತ್ತಿದೆ. ನಾವು ಜ್ಞಾನದ ಮಾರ್ಗವನ್ನು ತಪ್ಪಿಸಿಕೊಂಡಿದ್ದೆಲ್ಲಿ ಎಂಬುದರ ಬಗ್ಗೆ ಮರುಚಿಂತನೆ ಅಗತ್ಯವಿದೆ. ನಮ್ಮ ಜೀವನ ಶೈಲಿ ಬದಲಾಗಬೇಕಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ “ಮೊದಲು ಆಗು, ನಂತರ ಉಪದೇಶಿಸು” ಎನ್ನುವುದು ಬಹುತೇಕ ಸಮಸ್ಯೆಗಳಿಗೆ ಪರಿಹಾರವಾಗಿದೆ. ಈ ಎಲ್ಲವುಗಳ ಹಿನ್ನೆಲೆಯಲ್ಲಿ, ಐಐಇಎಸ್‌ಟಿ ಸಂಸ್ಥೆಯನ್ನು ಪರಿಸರ ಸ್ನೇಹಿಯನ್ನಾಗಿ ಮಾಡುವ ಕುರಿತು ಗಂಭೀರ ಚಿಂತನೆ ಇದೆ ಎಂದರು.

ಐಐಇಎಸ್‌ಟಿ ಸಂಸ್ಥೆಯ ಇಡೀ ಆವರಣವು ಸಂಪೂರ್ಣವಾಗಿ ತ್ಯಾಜ್ಯಮುಕ್ತವಾಗಬೇಕು. ಮಳೆ ನೀರು ಕೊಯ್ಲಿಗೆ ಆದ್ಯತೆ ನೀಡಬೇಕು. ಕ್ಯಾಂಪಸ್ಸಿನ ಸುಮಾರು 120 ಎಕರೆ ವಿಸ್ತಾರದ ಆವರಣದಲ್ಲಿ ಬೀಳುವ ಮಳೆಯ ಪ್ರತಿ ಹನಿ ಸಂಗ್ರಹವಾಗಬೇಕು ಹಾಗೂ ಇಲ್ಲಿಯ ತ್ಯಾಜ್ಯ ನೀರನ್ನು ಮರ-ಗಿಡಗಳಿಗೆ ಹರಿಸುವ ರೀತಿಯಲ್ಲಿ ಯೋಜನೆ ರೂಪಿಸಬೇಕು. ಇಡೀ ಕ್ಯಾಂಪಸ್ಸು ಸೂರ್ಯಶಕ್ತಿಯ ಮೂಲಕವೇ ಬೆಳಗಬೇಕು. ಈ ನಿಟ್ಟಿನಲ್ಲಿ ಹೊಸ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಐಐಇಎಸ್‌ಟಿ ಸಂಸ್ಥೆಯನ್ನು ಪರಿಸರ ಸ್ನೇಹಿಯನ್ನಾಗಿ ಮಾಡಲಾಗುತ್ತದೆ. ಒಂದು ಶೈಕ್ಷಣಿಕ ಸಂಸ್ಥೆಯು ಹೇಗೆ ಮಾದರಿಯಾಗಬಲ್ಲುದು ಎಂಬುದನ್ನು ನಾವು ತೋರಿಸುತ್ತೇವೆ ಎಂದರು. ಕಲೆ, ವಿಜ್ಞಾನ ಹೀಗೆ ವಿವಿಧ ಜ್ಞಾನಶಾಖೆಗಳಲ್ಲಿ ವಿನೂತನತೆ, ಸುಸ್ಥಿರ ಅಭಿವೃದ್ಧಿ ಕಾಯ್ದುಕೊಳ್ಳುವುದು ಸಂಸ್ಥೆಯ ಉದ್ದೇಶವಾಗಿದೆ. ಬಂಗಾಳ ವಿಭಜನೆ, ಕೈಗಾರಿಕಾ ಕ್ರಾಂತಿ, ಕೃತಕ ಬುದ್ಧಿಮತ್ತೆ, ವಿಜ್ಞಾನ-ತಾಂತ್ರಿಕತೆ ಹೀಗೆ ವಿವಿಧ ವಲಯಗಳಲ್ಲಿ ಹತ್ತು ಹಲವು ಬದಲಾವಣೆಗಳನ್ನು ಕಂಡಿದ್ದೇವೆ. ಬದಲಾವಣೆಗಳನ್ನು ನಾವು ಸ್ವೀಕರಿಸಿದ್ದೇವೆ. ಸವಾಲಾದ ಎಲ್ಲಾ ಅಡೆತಡೆಗಳನ್ನು ಎದುರಿಸಿದ್ದೇವೆ. ಆದರೂ, ಸಮಾಜದ ಯಾವುದೇ ವಲಯವು ಸಮಸ್ಯೆಗಳಿಂದ ಮುಕ್ತವಾಗಿಲ್ಲ. ಇಂತಹ ಸವಾಲುಗಳು ನಮ್ಮ ಮುಂದೆ ಇವೆ. ಅವುಗಳನ್ನು ವಿಜ್ಞಾನ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಮುಂತಾದವುಗಳ ಕೊಡುಗೆಗಳ ಮೂಲಕ ಪರಿಹರಿಸಿಕೊಳ್ಳಬೇಕಿದೆ ಎಂದರು. ನಮ್ಮ ದೇಶದ ಪರಂಪರೆ-ಸಂಸ್ಕೃತಿಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅಭಿಮಾನವಿರಲಿ. ಅವರು ಮಾನವೀಯತೆ ಬೆಳೆಸಿಕೊಂಡು ಉತ್ತಮ ನಾಗರಿಕರಾಗಲಿ ಎಂದು ತಾವು ಆಶಿಸುವುದಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಹೇಳಿದರು.

ಡಿಆರ್‌ಡಿಓ ಮಾಜಿ ಅಧ್ಯಕ್ಷ, ಲಘುವಿಮಾನಗಳ ತಯಾರಿಕಾ ವಿಜ್ಞಾನಿ ಹಾಗೂ ವಾರಣಾಸಿಯ ಐಐಟಿ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಕೋಟ ಹರಿನಾರಾಯಣ, ಶಿಬಪುರದ ಐಐಇಎಸ್‌ಟಿ ಆಡಳಿತ ಮಂಡಳಿ ನಿರ್ದೇಶಕ ಪ್ರೊ. ಪಾರ್ಥಸಾರಥಿ ಚಕ್ರವರ್ತಿ, ತ್ರಿಪುರದ ಮಾಜಿ ರಾಜ್ಯಪಾಲ ಡಾ. ತಥಾಗತರಾಯ್, ಐಐಇಎಸ್‌ಟಿ ಆಡಳಿತ ಮಂಡಳಿಯ ಗಣ್ಯರು, ಬೋಧಕ ವರ್ಗದವರು, ಪಿಎಚ್‌ಡಿ ಹಾಗೂ ಸ್ನಾತಕೋತ್ತರ ಪದವಿ ಗಳಿಸಿದ ವಿದ್ಯಾರ್ಥಿಗಳು ಹಾಗೂ ವಿವಿಧ ಜ್ಞಾನಶಾಖೆಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಸಿರಿಧಾನ್ಯ ಮೇಳದಲ್ಲಿ ಗಮನ ಸೆಳೆದ ಅದಮ್ಯ ಚೇತನ



ಭಾರತ ಸರಕಾರದ ಒತ್ತಾಸೆಯ ಮೇರೆಗೆ ಸಂಯುಕ್ತ ರಾಷ್ಟ್ರ ಸಂಸ್ಥೆಯು ಸಿರಿಧಾನ್ಯಗಳ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವ ಸಲುವಾಗಿ ೨೦೨೩ನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ ಎಂದು ಘೋಷಿಸಿದೆ. ಸಿರಿಧಾನ್ಯಗಳು ದೇಶದ ಆಹಾರಬಿಕ್ಕಟ್ಟನ್ನು ನಿವಾರಿಸಲು ಸಹಾಯಕವಾಗುತ್ತವೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೂ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಅರಮನೆ ಮೈದಾನದ “ತ್ರಿಪುರವಾಸಿನಿ” ಆವರಣದಲ್ಲಿ ೨೦೨೪ರ ಜ. ೫ ರಿಂದ ಮೂರು ದಿನಗಳ ಕಾಲ) “ಸಿರಿಧಾನ್ಯ ಹಾಗೂ ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ-೨೦೨೪” ಆಯೋಜಿಸಲಾಗಿತ್ತು.

ಎರಡು ಲಕ್ಷ ಜನರು ಊಟ, ಉಪಾಹಾರ ಸೇವಿಸಿದ ಮೇಳದಲ್ಲಿ ಲಾರಿಗಟ್ಟಲೆ ತ್ಯಾಜ್ಯ ಸಂಗ್ರಹವಾಗಬೇಕಿತ್ತು. ಆದರೆ ಅದಮ್ಯ ಚೇತನ ಸಂಸ್ಥೆಯು ಪ್ಲೇಟ್ ಬ್ಯಾಂಕ್ ಯೋಜನೆ ಮೂಲಕ ಒದಗಿಸಿದ ತಟ್ಟೆ ಲೋಟಗಳನ್ನು ಬಳಸಿದ್ದುದರಿಂದ ಸುಮಾರು ೬೦ರಿಂದ ೭೦ ಲಾರಿಗಳಷ್ಟು ತ್ಯಾಜ್ಯ ಸಂಗ್ರಹವಾಗುವುದು ತಪ್ಪಿತು.



ಈ ನಿಟ್ಟಿನಲ್ಲಿ ಸಂಸ್ಥೆಯ ಸ್ವಯಂ ಸೇವಕರಾದ ಶ್ರೀ/ಶ್ರೀಮತಿ ರಾಜಲಕ್ಷ್ಮಿ, ವನಿತಾ ಹೆಗ್ಡೆ, ಸುಜಾತ, ಶಾರದಾ ಪ್ರಕಾಶ್, ಗೀತಾಗಣೇಶ್, ವಿಶಾಲಾಕ್ಷಿ, ಪ್ರಕಾಶ್, ಶ್ರೀನಿಧಿ, ಮುತ್ತುರಾಜ್ ಮತ್ತಿತರರು ಸ್ಮರಣೀಯ ಸೇವೆ ಸಲ್ಲಿಸಿದ್ದಾರೆ.

# ಸಾತ್ವಿಕ ಪೌಷ್ಟಿಕ ಆಹಾರ



ಸಾತ್ವಿಕ ಆಹಾರ ಪದ್ಧತಿಯನ್ನು ಒಂದು ಆಂದೋಲನದ ರೀತಿಯಲ್ಲಿ ಪ್ರಚಾರ ಮಾಡಬೇಕಾಗಿದೆ. ಜನರಲ್ಲಿ ಶ್ರದ್ಧೆ ಬೆಳೆಸಲು ಧಾರ್ಮಿಕ ಮುಖಂಡರು ಆಂದೋಲನದ ನೇತೃತ್ವ ವಹಿಸಬೇಕು. ಸಸ್ಯಾಹಾರವು ಆರೋಗ್ಯಕ್ಕೆ ಪೋಷಕವಾದ ಆಹಾರ. ನಮ್ಮ ಪಾರಂಪರಿಕ ಅಡುಗೆಯಲ್ಲಿ ೧೫೦ಕ್ಕೂ ಹೆಚ್ಚು ತಂಬುಳಿಗಳ ಪ್ರಸ್ತಾಪವಿದೆ. ಆಧುನಿಕತೆ ಎಂದರೆ ಪಾಶ್ಚಾತ್ಯರ ಅನುಕರಣೆ ಎಂಬ ಭಾವನೆಯನ್ನು ದೂರಮಾಡಿ ಸಾತ್ವಿಕ ಪ್ರವೃತ್ತಿಯನ್ನು ಬೆಳೆಸುವ ಆಹಾರಪದ್ಧತಿಯನ್ನು ಪ್ರಚಾರ ಮಾಡಬೇಕು. **- ಪ್ರೊ. ಪಿ. ವಿ. ಕೃಷ್ಣಭಟ್ಟ**



ಸಕ್ಕರೆ, ಹಾಲು, ಬೇಳೆಕಾಳುಗಳ ಉತ್ಪಾದನೆಯಲ್ಲಿ ನಮ್ಮದೇಶವು ವಿಶ್ವದ ಮೊದಲ ಮೂರು ಸ್ಥಾನಗಳಲ್ಲಿರುವುದಾದರೂ ಪೌಷ್ಟಿಕತೆಯ ವಿಚಾರದಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಿಗಿಂತ ಹಿಂದಿರುವುದು ಅಂಕಿಅಂಶಗಳಿಂದ ತಿಳಿದುಬರುತ್ತದೆ. ಅಪೌಷ್ಟಿಕತೆಯಿಂದ ಮಕ್ಕಳಲ್ಲಿ ದೈಹಿಕ ಸಾಮರ್ಥ್ಯದ ಕೊರತೆ ಕಂಡುಬರುತ್ತಿದೆ. ನಮ್ಮ ಆಹಾರ ವಿಷಪೂರಿತವಾಗಿದೆ. ಪಿಜ್ಜಾ, ಬರ್ಗರ್, ಬನ್, ಮ್ಯಾಗಿ ಮುಂತಾದ ಧಿಡೀರ್ ಆಹಾರದ ಕಡೆ ಜನರ ಒಲವು ಹೆಚ್ಚುತ್ತಿದೆ. ಸಸ್ಯಾಹಾರವೂ ಕೂಡ ಮಾಂಸಾಹಾರದಷ್ಟೇ ಪ್ರಮಾಣದಲ್ಲಿ ಪ್ರೋಟೀನ್ ಒದಗಿಸಬಲ್ಲುದು. ಸಸ್ಯಾಹಾರದಿಂದಲೂ ಅಗತ್ಯಪ್ರಮಾಣದ ಪೌಷ್ಟಿಕಾಂಶಗಳನ್ನು ಪಡೆಯಬಹುದು. **-ತೇಜಸ್ವಿನಿ ಅನಂತಕುಮಾರ್**



ಆಹಾರವು ಒಂದು ಉದ್ದಿಮೆಯಾಗಿರುವ ಕಾಲದಲ್ಲಿ ಸಸ್ಯಾಹಾರದಲ್ಲಿ ಪ್ರೋಟೀನ್ ಇಲ್ಲ ಎಂಬ ತಪ್ಪುಕಲ್ಪನೆ ಪ್ರಚಾರದಲ್ಲಿದೆ. ಸರಕಾರ ಮತ್ತು ಆಹಾರೋದ್ಯಮಗಳು ಪರಸ್ಪರ ಕೈಜೋಡಿಸಿ ಸುಳ್ಳುಗಳನ್ನು ಹರಡುತ್ತಿವೆ. ICMR ಅಂಕಿಅಂಶಗಳ ಪ್ರಕಾರ ನಮ್ಮ ಶೇ ೬೦ರಷ್ಟು ಪ್ರೊಟೀನ್ ಅಗತ್ಯಗಳನ್ನು ಸಸ್ಯಮೂಲದಿಂದಲೇ ಪಡೆಯಬಹುದು. ಮೊಟ್ಟೆಯಲ್ಲಿ ಪ್ರೊಟೀನ್ ಇರುವುದೇನೋ ನಿಜ, ಆದರೆ ಅದರಲ್ಲಿ ದೇಹಕ್ಕೆ ಹಾನಿಕರವಾದ ಕೊಲೆಸ್ಟರಾಲ್ ಕೂಡ ಹೆಚ್ಚಿನ ಪ್ರಮಾಣದಲ್ಲಿದೆ. **-ಡಾ. ಎಚ್.ಎಸ್. ಪ್ರೇಮಾ, ಆಹಾರತಜ್ಞರು**



ತಮಿಳುನಾಡಿನಲ್ಲಿಯ ಒಂದು ಸಂಸ್ಥೆಯ ಬಾಲವಾಡಿಯಲ್ಲಿ ಮಕ್ಕಳಿಗೆ ಪೌಷ್ಟಿಕವಾದ ನುಗ್ಗೆ ಸೊಪ್ಪಿನ ಕಷಾಯ ಕೊಡುತ್ತಾರೆ. ನಮ್ಮ ರಾಜ್ಯದಲ್ಲಿಯೂ ಸರಳವಾಗಿ ಸಿಗುವ ಪೌಷ್ಟಿಕ, ಸಾತ್ವಿಕ, ಸುರಕ್ಷಿತ ಆಹಾರವನ್ನು ಮಕ್ಕಳಿಗೆ ನೀಡುವ ತೀರ್ಮಾನಗಳನ್ನು ಸರಕಾರ ಕೈಗೊಳ್ಳಬೇಕು. **-ಅನಂತ ಹೆಗಡೆ ಅಶೀಸರ, ಪರಿಸರವಾದಿ**



ಕೃತಕವಾಗಿ ಸೃಷ್ಟಿಸಲ್ಪಟ್ಟ ಎಲ್ಲ ಆಹಾರವೂ ಆರೋಗ್ಯಕ್ಕೆ ಹಾನಿಕರ. ಸಸ್ಯಾಹಾರದಲ್ಲಿ ಕೋಸಂಬರಿ ಮುಂತಾದ ಬೇಯಿಸದ ಆಹಾರಗಳೂ ಸಾತ್ವಿಕ ಆಹಾರವೇ. ಮೊಟ್ಟೆಯೂ ಸೇರಿದಂತೆ ಭ್ರೂಣರೂಪದ ಎಲ್ಲವೂ ಮಾಂಸಾಹಾರವೇ ಎಂದು ಮಹಾಭಾರತದಲ್ಲಿ ಹೇಳಲಾಗಿದೆ. **- ಸತ್ಯನಾರಾಯಣಾಚಾರ್, ಪೇಜಾವರ ಮಠದ ಪ್ರತಿನಿಧಿ**



ಸಾತ್ವಿಕ ಪೌಷ್ಟಿಕ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳುವುದರ ಮಹತ್ತ್ವವನ್ನು ಕುರಿತು ಇತ್ತೀಚೆಗೆ ಅದಮ್ಯಚೇತನದ ಸಭಾಂಗಣದಲ್ಲಿ ಸಂವಾದ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿತ್ತು. ಸೋಂದೆಯ ಸ್ವರ್ಣವಲ್ಲೀ ಮಠದ ಶ್ರೀ ಗಂಗಾಧರೇಶ್ವರ ಸ್ವಾಮೀಜಿ, ಸೋದೆಯ ಜೈನಮಠದ ಭಟ್ಟಾಕಲಂಕ ಭಟ್ಟಾರಕ ಯತಿಗಳ ಸಾನ್ನಿಧ್ಯದಲ್ಲಿ ಜರುಗಿದ ಸಂವಾದದಲ್ಲಿ ನಾಡಿನ ಹಲವರು ವೈದ್ಯರು, ಆಹಾರತಜ್ಞರು, ಪತ್ರಕರ್ತರು, ನ್ಯಾಯವಾದಿಗಳು ಮೊದಲಾದವರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸ್ವರ್ಣವಲ್ಲೀ ಶ್ರೀ ಗಂಗಾಧರೇಶ್ವರ ಸ್ವಾಮೀಜಿಯವರು ಮಾತನಾಡಿ, ಸಾತ್ವಿಕ-ಪೌಷ್ಟಿಕ ಆಹಾರದ ಬಗ್ಗೆ ವೈದ್ಯಕೀಯ ವಿಜ್ಞಾನ, ಆಯುರ್ವೇದ ವಿಜ್ಞಾನ, ಕಾನೂನು, ಪರಿಸರ ಮುಂತಾದ ಬೇರೆ ಬೇರೆ ಆಯಾಮಗಳಲ್ಲಿ ಚಿಂತನೆ ನಡೆಯುತ್ತಿರುವ ಕಾಲದಲ್ಲಿ ಅದಮ್ಯ ಚೇತನ ಸಂಸ್ಥೆಯ ಆಶ್ರಯದಲ್ಲಿ ಸಕಾಲಿಕವಾದ ವಿಚಾರ ಸಂಕಿರಣ ನಡೆಯುತ್ತಿದೆ. ಸಮಾಜದ ಎಲ್ಲವರ್ಗದ ಜನರನ್ನು ಒಂದೇ ವೇದಿಕೆಯಲ್ಲಿ ಸೇರಿಸಿರುವ ಶ್ರೀಮತಿ ತೇಜಸ್ವಿನಿ ಅನಂತಕುಮಾರ್‌ಅವರ ಕ್ರಮ ಪ್ರಶಂಸನೀಯ ಎಂದರು.

"ಸಸ್ಯಾಹಾರ ಅಥವಾ ಶಾಕಾಹಾರವು ಯೋಗಕ್ಕೆ ಯುಕ್ತವಾದ ಆಹಾರ. "ಯುಕ್ತಾಹಾರವಿಹಾರಸ್ಯ, ಯುಕ್ತಚೇಷ್ಟಸ್ಯ ಕರ್ಮಸು" ಎಂದು ಭಗವಂತನೇ ಗೀತೆಯಲ್ಲಿ ಹೇಳಿರುವಂತೆ ಹಿತಮಿತವಾದ ಸಾತ್ವಿಕ ಆಹಾರ ಸಾಧಕರಿಗೆ ಅತ್ಯಗತ್ಯ. ಮಾನವನ ದೇಹರಚನೆ ಮಾಂಸಾಹಾರಕ್ಕೆ ಹೇಳಿಸಿದ್ದಲ್ಲ. ಋಷಿಗಳು ಮಾಂಸಾಹಾರಿಗಳಾಗಿದ್ದರು ಎಂದು ಕೆಲವು ಕಡೆ ಕೇಳಿಬರುತ್ತಿರುವ ಮಾತು ನಿಜವಲ್ಲ. ಯಾವ ಋಷಿಯೂ ಮಾಂಸಾಹಾರವನ್ನೇ ಜೀವನ ಕ್ರಮವನ್ನಾಗಿ ಇಟ್ಟುಕೊಂಡಿರಲಿಲ್ಲ. ನಾವು ಮಾಂಸಾಹಾರದ ವಿರೋಧಿಗಳಲ್ಲ; ಆದರೆ ನಮ್ಮ ದೇಶವು ಕೋವಿಡ್‌ನಂತಹ ಮಾಹಾಮಾರಿಯನ್ನು ಯಶಸ್ವಿಯಾಗಿ ಎದುರಿಸಲು ಸಸ್ಯಾಹಾರವೇ ಕಾರಣ ಎಂದು ತಜ್ಞರು ಹೇಳಿದ್ದಾರೆ. ನಮ್ಮ ಆಹಾರ ವಿಜ್ಞಾನವು ಆಯುರ್ವೇದದ ಹಿನ್ನೆಲೆಯನ್ನು



ನಮ್ಮ ಮನಃಸ್ಥಿತಿಯು ನಮ್ಮ ನಾಲಗೆ ರುಚಿಯನ್ನು ಅವಲಂಬಿಸಿರುತ್ತದೆ. ಪ್ರಜೆಗಳಿಗೆ ಇಂತಹದೇ ಆಹಾರವನ್ನು ತಿನ್ನಿ ಎಂದು ಹೇಳುವುದು ಸರಕಾರದ ಕೆಲಸವಲ್ಲ. **-ಎನ್. ಕುಮಾರ್, ಹೈಕೋರ್ಟ್(ನಿವೃತ್ತ) ನ್ಯಾಯಮೂರ್ತಿ**

# ಆರೋಗ್ಯಕರ ಜೀವನಕ್ಕೆ ಆಧಾರ




ಹೊಂದಿದೆ. ವಿದೇಶೀಯರ ಆಹಾರ ಪದ್ಧತಿ ನಮಗೆ ಎಷ್ಟರ ಮಟ್ಟಿಗೆ ಸೂಕ್ತ ಎಂಬುದನ್ನು ವಿಮರ್ಶಿಸುವ ಕಾಲ ಬಂದಿದೆ. ಸಾತ್ವಿಕ ಶಾಕಾಹಾರ ಪದ್ಧತಿಯ ಪ್ರಯೋಜನಗಳನ್ನು ಮಾಧ್ಯಮಗಳ ಮೂಲಕ ಪ್ರಚಾರ ಮಾಡುವ ಕೆಲಸ ನಡೆಯಬೇಕು. ಈ ಕುರಿತು ಸಾಹಿತ್ಯ ಸೃಷ್ಟಿಯಾಗಬೇಕು. ಶಾಕಾಹಾರದ ಕುರಿತು ಇರುವ ತಪ್ಪು ಕಲ್ಪನೆಗಳನ್ನು ದೂರಮಾಡಬೇಕು. ಪೇಜಾವರ ಶ್ರೀಗಳು, ಸಿದ್ದಗಂಗಾ ಶ್ರೀಗಳು ಮತ್ತು ಸುತ್ತೂರು ಶ್ರೀಗಳು ಈ ನಿಟ್ಟಿನಲ್ಲಿ ತಮ್ಮ ಸಹಕಾರವನ್ನು ನೀಡಿದ್ದಾರೆ. ಇತರ ಎಲ್ಲ ಮಠಾಧೀಶರೂ ಈ ಮಹತ್ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳಬೇಕು." ಎಂದು ಸ್ವರ್ಣವಲ್ಲೀ ಶ್ರೀಗಳು ಕರೆನೀಡಿದರು.

ಸೋದೆ ಜೈನಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿಯವರು ಮಾತನಾಡಿ, "ಸೂರ್ಯೋದಯಕ್ಕೆ ಮೊದಲು ಮತ್ತು ಸೂರ್ಯಾಸ್ತದ ನಂತರ ಆಹಾರ ಸೇವಿಸುವುದು ಜೈನರ ಆಹಾರ ಪದ್ಧತಿ. ಮನಸ್ಸಿಗೆ, ಶರೀರಕ್ಕೆ ಮತ್ತು ಪರಿಸರಕ್ಕೆ ಮಾನವನ ಬಾಧ್ಯತೆಯನ್ನು ಲಕ್ಷ್ಯದಲ್ಲಿರಿಸಿಕೊಂಡು ಮದ್ಯ, ಮಧು, ಮಾಂಸ, ಔದುಂಬರ ಫಲಗಳು ಮತ್ತು ಕಂದಮೂಲಗಳು ಅಭಕ್ಷ್ಯ ಎಂದು ಕಲ್ಯಾಣಕಾರಕ ಮತ್ತು ವೈದ್ಯಸಾರ ಗ್ರಂಥಗಳು ತಿಳಿಸುತ್ತವೆ. ಮುಂದಿನ ಪೀಳಿಗೆಗೆ ನಾವು ಕೊಡಬಹುದಾದ ಉತ್ತಮ ಕೊಡುಗೆ – ಊಟಮಾಡುವ ಕಲೆ. ಚಂದನ ವಾಹಿನಿಯ ಜಿನದರ್ಶನ ಎಂಬ ವಾರದ ಕಾರ್ಯಕ್ರಮದಲ್ಲಿ ಐದು ನಿಮಿಷಗಳ ಕಾಲ ಜೈನ ಆಹಾರ ಪದ್ಧತಿಗಾಗಿಯೇ ಮೀಸಲಾಗಿರಿಸಿದೆ." ಎಂದು ವಿವರಿಸಿದರು.

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ.ವಿ. ಕೃಷ್ಣಭಟ್ಟರು ಉಪಸ್ಥಿತರಿದ್ದರು. ಸಿದ್ದಗಂಗಾ ಮಠ, ಕಾಶ್ಮೀರದ ಶಾರದಾಪೀಠ, ಸುತ್ತೂರು ಶಿವರಾತ್ರೀಶ್ವರ ಸಂಸ್ಥಾನ ಮೊದಲಾದ ಧಾರ್ಮಿಕ ಕೇಂದ್ರಗಳ ಪ್ರತಿನಿಧಿಗಳೂ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಅದಮ್ಯಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಎಲ್ಲರನ್ನೂ ಸ್ವಾಗತಿಸಿದರು.



ಈ ಜಗತ್ತಿನಲ್ಲಿ ಮಾನವನೇ ಇಲ್ಲದಿದ್ದರೆ ಪ್ರಕೃತಿ ನೆಮ್ಮದಿಯಿಂದ ಉಳಿಯುತ್ತದೆ; ಅದೇ ಪ್ರಕೃತಿ, ಪರಿಸರವಿಲ್ಲದಿದ್ದರೆ ಮಾನವ ಒಂದು ದಿನವೂ ಉಳಿಯಲಾರ. ಸಸ್ಯಾಹಾರಿ, ಮಾಂಸಾಹಾರಿ ಪ್ರಾಣಿಗಳೆರಡೂ ಕಾಡಿನಲ್ಲಿ ಇದ್ದರೆ ಸಮತೋಲನವುಳಿದು ಅರಣ್ಯನಾಶ ತಪ್ಪುತ್ತದೆ. ಮನುಷ್ಯನ ಬಾಯಿಚಪಲಕ್ಕೆ ಕಾಡುಪ್ರಾಣಿಗಳ ಬಲಿಯಾಗಿ ನಮ್ಮ ಕಾಡುಗಳ ನಾಶವಾಗುತ್ತಿದೆ.
**- ಟಿ. ಎಸ್. ಗೋಪಾಲ್, ಲೇಖಕರು**



ಬೆಂಗಳೂರಿನ ನಿಮ್ಹಾನ್ಸ್ ಸಂಶೋಧನಾ ವರದಿಯೊಂದರ ಪ್ರಕಾರ ಸಸ್ಯಾಹಾರವೇ ಉತ್ತಮ ಎಂದು ಪ್ರತಿಪಾದಿಸಲಾಗಿದೆ. ಸಸ್ಯಮೂಲದ ಆಹಾರದ ಧಾರ್ಮಿಕ, ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಆಯಾಮಗಳನ್ನು ನ್ಯಾಯಾಲಯಗಳಲ್ಲಿಯೂ ಪ್ರತಿಪಾದಿಸಬೇಕಾಗಿದೆ.
**-ವಿಕ್ರಂ ಫಡ್ಕೆ, ನ್ಯಾಯವಾದಿಗಳು**



ನಾನು ಮಾಂಸಾಹಾರಿ ಕುಟುಂಬದಲ್ಲಿ ಜನಿಸಿದವಳು. ಆದರೆ ಮನೆಯಲ್ಲಿ ಬಡತನ ಮತ್ತು ಬೆಳೆದ ಪರಿಸರದ ಕಾರಣದಿಂದ ನಾವು ಸಸ್ಯಾಹಾರವನ್ನೇ ಪ್ರಧಾನವಾಗಿ ಬಳಸುತ್ತಿದ್ದೆವು. ಮದುವೆಯ ನಂತರ ಸಸ್ಯಾಹಾರಕ್ಕೆ ಸಂಪೂರ್ಣವಾಗಿ ಒಗ್ಗಿಕೊಳ್ಳಲು ನನಗೇನೂ ಕಷ್ಟವಾಗಲಿಲ್ಲ. ಇದರಿಂದ ನನ್ನ ಆರೋಗ್ಯದ ಮೇಲೂ ಪ್ರತಿಕೂಲ ಪರಿಣಾಮ ಉಂಟಾಗಲಿಲ್ಲ.
**- ಜಾಯ್ಸ್‌ಪ್ರಕಾಶ್, ಮಹಿಳಾ ಸಬಲೀಕರಣ ಕಾರ್ಯಕರ್ತೆ**



ನಮ್ಮ ದೇಶವು ಕೋವಿಡ್‌ನಿಂದ ಪಾರಾಗಲು ನಮ್ಮ ಆಹಾರ ಪದ್ಧತಿಯೇ ಕಾರಣ. ಮಾಂಸಾಹಾರವನ್ನು ಬೇಡ ಎನ್ನುವುದಕ್ಕಿಂತ ಸಸ್ಯಾಹಾರದ ಪ್ರಯೋಜನಗಳನ್ನು ಪ್ರಚಾರಮಾಡುವುದು ಸೂಕ್ತ.
**- ಚನ್ನೇಗೌಡ, ವಿಜಯವಾಣಿ ಸಂಪಾದಕರು, ಬೆಂಗಳೂರು**



ಆಹಾರದಲ್ಲಿ ತರಕಾರಿ ಸೇವಿಸುವುದರಿಂದ, ಶೇ. 28ರಷ್ಟು ಹೃದಯಾಘಾತಗಳನ್ನು ತಪ್ಪಿಸಬಹುದು. ಋಷಿಮುನಿಗಳು ಹಣ್ಣು-ಹಂಪಲು ತಿಂದು 100-150ವರ್ಷ ಬದುಕಿದ್ದ ಉದಾಹರಣೆಯಿದೆ. ಆರೋಗ್ಯಪೂರ್ಣ ಬದುಕಿಗೆ ಸಸ್ಯಾಹಾರವೇ ಪರಿಹಾರ. **-ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಪ್ರಸಿದ್ಧ ವೈದ್ಯರು**



ಆಯಾ ಪ್ರದೇಶಗಳಲ್ಲಿ ಬೆಳೆಯುವ, ಪರಿವಾರದ ಪಾರಂಪರಿಕ ಆಹಾರವನ್ನೇ ಸೇವಿಸುವುದು ಯುಕ್ತ.
**- ಡಾ. ಸಾವಿತ್ರಿ ಸಾಂಬಮೂರ್ತಿ**



ಆಯುರ್ವೇದ ತಜ್ಞರು. ಇತರ ಆಹಾರಪದ್ಧತಿಗಳನ್ನು ಖಂಡಿಸುವುದಕ್ಕಿಂತ ಸಸ್ಯಾಹಾರದ ಪಾಸಿಟಿವ್ ಅಂಶಗಳನ್ನೆಲ್ಲ ಪ್ರಚಾರ ಮಾಡುವುದು ಸೂಕ್ತ.
**- ಡಾ. ಹೆಚ್. ಎಸ್. ನಾಗರಾಜ್, ಶಿಕ್ಷಣತಜ್ಞರು**



ಸಾತ್ವಿಕ ಆಹಾರದ ಪ್ರಯೋಜನಗಳನ್ನು ಜನರಿಗೆ ಮನವರಿಕೆ ಮಾಡುವ ಸಲುವಾಗಿ ಇವತ್ತಿನ ಸಾಮಾಜಿಕ ಮಾಧ್ಯಮಗಳನ್ನೂ ಒಳಗೊಂಡಂತೆ ಲಭ್ಯವಿರುವ ಎಲ್ಲ ವೇದಿಕೆಗಳನ್ನೂ ಬಳಸಿಕೊಂಡರೆ ಹೆಚ್ಚಿನ ಯಶಸ್ಸು ದೊರೆಯುತ್ತದೆ **- ಹರಿಪ್ರಕಾಶ ಕೋಣೆಮನೆ, ಪತ್ರಕರ್ತರು.**

# ಅಯೋಧ್ಯೆಯಲ್ಲಿ ಅದಮ್ಯಚೇತನ



ಅದಮ್ಯ ಚೇತನ ಕೇಂದ್ರದ ವಿಳಾಸ:
**ವಿಜಯರಾಮ್ ಭಕ್ತಾಮಲ್ ಆಶ್ರಮ, ರಾಮ್ ಜಾನಕಿ ಚೌರಾಹ ಸಮೀಪ, ನ್ಯೂ ಕಾಲೊನಿ, ಅಯೋಧ್ಯಾ 224123**

ಅಯೋಧ್ಯೆಯ ಮೈಕೊರೆವ ಚಳಿಯಲ್ಲಿ, ರಾಮಲಲ್ಲಾನ ಪ್ರತಿಷ್ಠಾಪನೆಯ ಪಾವನ ಸಂದರ್ಭದಲ್ಲಿ ರಾಮಭಕ್ತರಿಗೆ ಕರ್ನಾಟಕದ ಪ್ರಸಾದವನ್ನು ಬಿಸಿಬಿಸಿಯಾಗಿ ವಿತರಿಸುವ ಅದಮ್ಯಚೇತನ ಸಂಸ್ಥೆಯ ಸೇವೆ ಪ್ರಾರಂಭವಾಗಿದೆ. ಮುಂದಿನ ಒಂದು ತಿಂಗಳ ಕಾಲ ರುಚಿ ರುಚಿಯಾದ ಇಡ್ಲಿ ಸಾಂಬಾರ್, ಬಿಸಿಬೇಳೆ ಬಾತ್, ಪಾಯಸ, ಸಕ್ಕರೆ ಪೊಂಗಲ್, ಖಿಚಡಿಗಳನ್ನು ಬಡಿಸಲಾಗುತ್ತಿದೆ. ಸಂಸ್ಥೆಯ ಧ್ಯೇಯದಂತೆ ಸ್ಟೀಲ್ ಲೋಟ ತಟ್ಟೆಗಳನ್ನು ಬಳಸಲಾಗುತ್ತಿದೆ. ಪಾತ್ರೆಗಳನ್ನು ಯಾಂತ್ರಿಕವಾಗಿ ಶುಚಿಗೊಳಿಸಲಾಗುತ್ತಿದೆ. ತ್ಯಾಜ್ಯನಿರ್ವಹಣೆಗೆ 'ವರಾಹ' ಸಂಯಂತ್ರವನ್ನೂ ಬಳಸಲಾಗುತ್ತಿದೆ.





## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಡಿಸೆಂಬರ್ ನಲ್ಲಿ ವಿತರಿಸಲಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ 2.00 ರಿಂದ 3.00 | 4,650 | 1,79,400 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ 12.30 ರಿಂದ 1.30 | 3,000 | 1,17,600 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ 12.30 ರಿಂದ 1.30 | 3,000 | 98,800 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು 12.30 ರಿಂದ 1.30 | 4,650 | 59,850 |
| 5 | ಅನಂತ ಪ್ರೇರಣಾ ಕೇಂದ್ರ, ಸೌತ್ ಎಂಡ್ ವೃತ್ತ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 260 | 20,120 |
| 6 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು (ಮ.12:30ರಿಂದ 1:30ರವರೆಗೆ) | 4650 | 14,550 |
| | **ಒಟ್ಟು ಅಂದಾಜು** | **20,210** | **4,90,320** |

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ಚಟುವಟಿಕೆ |
|---|---|---|---|
| **416** **17/12/23** | ಬೆಂಗಳೂರು ವಿ.ವಿ. ಬಯೋ ಪಾರ್ಕ್. | ಬಿಎಂಎಸ್ ಕಾಲೇಜು ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು ಮೊದಲಾದವರು. | 10 ಗಿಡಗಳು. ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಿ, ಕಳೆ ಕಿತ್ತು ಸ್ವಚ್ಛಗೊಳಿಸಲಾಯಿತು. |
| **417** **24/12/23** | ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯ ಮಾರಗೊಂಡನಹಳ್ಳಿ ಕೆರೆಯ ಬದಿ | ಬೆಂಗಳೂರಿನ ಬಿಎಂಎಸ್ ಕಾಲೇಜು, ಎನ್. ಎಸ್. ಎಸ್ ವಿದ್ಯಾರ್ಥಿಗಳು, ಗ್ರೀನ್ ವಾಲಂಟಿಯರ್ಸ್ ಹಾಗೂ ಸ್ಥಳೀಯರು. | 50 ಗಿಡಗಳು. ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲಾಯಿತು. |
| **418** **31/12/23** | ಬೆಂಗಳೂರಿನ ಆವಲಹಳ್ಳಿ-ಅಂಜನಾಪುರ ಕೆರೆಯ ಬದಿ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬೆಂಗಳೂರಿನ ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಗ್ರೀನ್ ವಾಲಂಟಿಯರ್ಸ್ ಹಾಗೂ ಸ್ಥಳೀಯರು. | 10 ಗಿಡಗಳು. ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಿ, ಕಳೆ ಕಿತ್ತು ಸ್ವಚ್ಛಗೊಳಿಸಲಾಯಿತು. |
| **419** **07/01/24** | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಹಾಗೂ ನೃಪತುಂಗ ಕಾಲೇಜಿನ ವಿದ್ಯಾರ್ಥಿಗಳು, ಕಲ್ಪವೃಕ್ಷ ಸಂಸ್ಥೆಯ ಮಕ್ಕಳು, ಎಡಿಎ ಸಂಸ್ಥೆಯ ಕೃಷ್ಣಮೂರ್ತಿ, ಹಸಿರು ಯೋಧರು. ಅದಮ್ಯ ಚೇತನದಲ್ಲಿ 26 ದಿನ ಇಂಟರ್ನ್ ಶಿಪ್ ಮಾಡಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. | 10 ಗಿಡಗಳು, ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲಾಯಿತು. |
| **420** **15/01/24** | ಬೆಂಗಳೂರಿನ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯ ಅನಂತ ವನ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು, ಯೂತ್ ಫಾರ್ ಸೇವಾ, ಯೂತ್ ಫಾರ್ ಪರಿವರ್ತನ ಸಂಸ್ಥೆಯ ಸದಸ್ಯರು | 2 ಗಿಡಗಳು ಹಾಗೂ ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲಾಯಿತು. |

# ಜಗದ್ಗುರು ರಾಮಾನಂದಾಚಾರ್ಯ ಸ್ವಾಮಿ ರಾಮಭದ್ರಾಚಾರ್ಯ

ವ್ಯಕ್ತಿ ವಿಶೇಷ ಮಾಲಿಕೆ



ಮಹಾವಿಷ್ಣುವಿನ ಪರಿಪೂರ್ಣಾವತಾರನಾದ ಶ್ರೀರಾಮನಿಗೆ ತನ್ನ ಪತ್ನಿಯಾದ ಸೀತಾದೇವಿಯ ಇರವನ್ನು ದಿವ್ಯದೃಷ್ಟಿಯ ಮೂಲಕ ಕಂಡುಹಿಡಿಯುವುದು ಕಷ್ಟವೇನಾಗಿರಲಿಲ್ಲ. ಅಂತಹ ದಿವ್ಯ ದೃಷ್ಟಿಯನ್ನು ಹೊಂದಿದ ಅನೇಕ ಋಷಿಮುನಿಗಳನ್ನು ತನ್ನ ಅರಣ್ಯವಾಸದಲ್ಲಿ ಶ್ರೀರಾಮ ಭೇಟಿಯಾಗಿದ್ದ. ದಿವ್ಯಾಸ್ತ್ರಗಳಿಂದ ಸಾಗರವನ್ನು ಬತ್ತಿಸಿ ತನ್ನ ಸೇನೆಯನ್ನು ಲಂಕೆಗೆ ಮುನ್ನಡೆಸುವ ಸಾಮರ್ಥ್ಯವೂ ಅವನಿಗಿತ್ತು. ಆದರೂ ಆತ ವಾನರರ ಸಖ್ಯ ಬೆಳೆಸಿ ಸೀತೆಯನ್ನು ಹುಡುಕುವ ಕೆಲಸಕ್ಕೆ ಅವರನ್ನು ನಿಯೋಜಿಸಿದ. ಸೇತುನಿರ್ಮಾಣಕ್ಕೂ ವಾನರರನ್ನೇ ಆತ ನಿಯೋಜಿಸಿದ.

ಮಾನವರು ತನ್ನ ನಡೆನುಡಿಗಳನ್ನು ಅನುಸರಿಸಲಿ ಎಂದು ಶ್ರೀರಾಮ ಮಾನವನಂತೆಯೇ ಬದುಕಿದ. ಸಮಸ್ತ ಜೀವಲೋಕದ ರಕ್ಷಣೆಯ ಕಾರ್ಯವು ಮಾನವರ ಕರ್ತವ್ಯವೆಂದು ಸಾರಲು ದುಷ್ಟ ರಾವಣನ ನಿಗ್ರಹದ ಯೋಜನೆಯಲ್ಲಿ ಎಲ್ಲರನ್ನೂ ತೊಡಗಿಸಿದ. ಶ್ರೀರಾಮನ ಕೆಲಸದಲ್ಲಿ ತೊಡಗಿಕೊಂಡ ಪ್ರತಿಯೊಬ್ಬರ ಹೃದಯದಲ್ಲಿ ಶ್ರೀರಾಮ ಸ್ವಯಂ ನೆಲೆಸುತ್ತಾನೆಂಬುದನ್ನು ಹನುಮಂತ ತನ್ನ ಎದೆಯನ್ನೇ ತೆರೆದು ತೋರಿಸಿದ.

ಇಂತಹ ಪುರುಷೋತ್ತಮ ಜನಿಸಿದ ರಾಮಜನ್ಮಭೂಮಿ ಸಮಸ್ತ ಹಿಂದೂಗಳಿಗೂ ಸ್ವರ್ಗಕ್ಕಿಂತ ಶ್ರೇಷ್ಠವಾದದ್ದು. ಅಯೋಧ್ಯೆಯ ಈ ಪವಿತ್ರಭೂಮಿಯಲ್ಲಿದ್ದ ದೇವಾಲಯವನ್ನು ಮೀರ್ ಬಾಕಿ ಎಂಬ ದುರುಳ ಕೆಡವಿ ಅದೇ ಸ್ಥಳದಲ್ಲಿ ಬಾಬರಿ ಮಸೀದಿಯನ್ನು ೧೫೨೮ - ೨೯ ರಲ್ಲಿ ನಿರ್ಮಿಸಿದ. ಇದರಿಂದ ಆಘಾತಕ್ಕೊಳಗಾದ ಹಿಂದೂಗಳು ಜನ್ಮಭೂಮಿಯ ವಿಮೋಚನೆಗಾಗಿ ಸುಮಾರು ೫೦೦ ವರ್ಷಗಳ ಸುದೀರ್ಘ ಹೋರಾಟವನ್ನು ಮಾಡಿದರು. ಅಂತಿಮವಾಗಿ, ದೇಶದ ಸರ್ವೋಚ್ಚ ನ್ಯಾಯಾಲಯದ ಕಟಕಟೆಯಲ್ಲಿ ನಡೆದ ಹೋರಾಟದಲ್ಲಿ ರಾಮಭಕ್ತರಿಗೆ ಜಯ ಲಭಿಸಿತು. ಮುಖ್ಯ ನ್ಯಾಯಾಧೀಶರಾದ ಶ್ರೀ ರಂಜನ್ ಗೋಗೋಯ್ ನೇತೃತ್ವದ, ನ್ಯಾಯಮೂರ್ತಿಗಳಾದ ಎಸ್ ಎ ಬೋಬ್ಡೆ, ಡಿ ವೈ ಚಂದ್ರಚೂಡ, ಅಶೋಕ್ ಭೂಷಣ್ ಮತ್ತು ಅಬ್ದುಲ್ ನಜೀರ್ ಅವರನ್ನೊಳಗೊಂಡ ಸಂವಿಧಾನ ಪೀಠವು ನವೆಂಬರ್ ೯, ೨೦೧೯ ರಂದು ವಿವಾದಿತ ಸ್ಥಳವು ರಾಮಜನ್ಮಭೂಮಿಯಾಗಿದ್ದು ಅದು ರಾಮಲಲ್ಲಾ ವಿರಾಜಮಾನ್ ಅವರಿಗೆ ಸೇರಿದ್ದೆಂದು ಸರ್ವಾನುಮತದ ತೀರ್ಪು ನೀಡಿತು.

ಶ್ರೀರಾಮನ ಈ ಐತಿಹಾಸಿಕ ಕೈಂಕರ್ಯದಲ್ಲಿ ಹಿರಿಯ ನ್ಯಾಯವಾದಿ ಶ್ರೀ ಕೆ ಪರಾಶರನ್ ಮತ್ತು ವಿರಕ್ತ ಸಂತ ಜಗದ್ಗುರು ಸ್ವಾಮಿ ರಾಮಭದ್ರಾಚಾರ್ಯ ಎಂಬ ಪುಣ್ಯಜೀವಿಗಳ ಪಾತ್ರವು ಅವರನ್ನು ಶ್ರೀರಾಮ ತಾನೇ ನಿಯೋಜಿಸಿಕೊಂಡನೋ ಎಂಬಂತೆ ಪವಾಡ ಸದೃಶವಾಗಿದೆ.

ರಾಮಜನ್ಮಭೂಮಿ ವಿವಾದದ ವಿಚಾರಣೆಯು ಒಂದು ಕುತೂಹಲದ ಹಂತವನ್ನು ತಲುಪಿದ್ದಾಗ ನ್ಯಾಯಾಧೀಶರು "ಎಲ್ಲದಕ್ಕೂ ವೇದವನ್ನೇ ಪ್ರಮಾಣ ಎನ್ನುತ್ತೀರಿ. ರಾಮಜನ್ಮಭೂಮಿಯ ವಿಚಾರದಲ್ಲಿ ವೇದಗಳಲ್ಲಿ ಪ್ರಮಾಣಗಳಿವೆಯೆ?" ಎಂದು ಪ್ರಶ್ನಿಸಿದರು. ಆಗ ಅಲ್ಲಿ ಓರ್ವ ಸಾಕ್ಷಿಯಾಗಿ ಹಾಜರಿದ್ದ ಜಗದ್ಗುರು ರಾಮಭದ್ರಾಚಾರ್ಯರು ಮುಂದೆ ಬಂದು ಸ್ಕಂದ ಪುರಾಣದ ವೈಷ್ಣವ ಕಾಂಡದ ಅಯೋಧ್ಯಾ ಮಹಾತ್ಮೆಯ ೧೮ ರಿಂದ ೨೫ರ ವರೆಗಿನ ಶ್ಲೋಕಗಳನ್ನು ತಮ್ಮ ನೆನಪಿನಿಂದಲೇ ಉದಾಹರಿಸಿದರು. ಅವುಗಳಲ್ಲಿ ೧೮ ಮತ್ತು ೧೯ ನೆಯ ಶ್ಲೋಕಗಳು ಹೀಗಿವೆ:

**ತಸ್ಮಾತ್ ಸ್ಥಾನತ ಐಶಾನೇ ರಾಮಜನ್ಮ ಪ್ರವರ್ತತೇ |**
**ಜನ್ಮಸ್ಥಾನಮಿದಂ ಪ್ರೋಕ್ತಂ ಮೋಕ್ಷಾದಿಫಲಸಾಧನಂ ||**
**ವಿಘ್ನೇಶ್ವರಾತ್ ಪೂರ್ವಭಾಗೇ ವಾಸಿಷ್ಠಾದುತ್ತರೇ ತಥಾ |**
**ಲೋಮಶಾತ್ ಪಶ್ಚಿಮೇ ಭಾಗೇ ಜನ್ಮಸ್ಥಾನಂ ತತಃ ಸ್ಮೃತಂ ||**

ಅಂದರೆ, ಈಶಾನ್ಯಭಾಗದಲ್ಲಿ ರಾಮಜನ್ಮಭೂಮಿಯಿದೆ. ಅದು ವಿಘ್ನೇಶ್ವರನಿಂದ ಪೂರ್ವಭಾಗದಲ್ಲಿ ವಾಸಿಷ್ಠದಿಂದ ಉತ್ತರಭಾಗದಲ್ಲಿ, ಲೋಮಶದಿಂದ ಪಶ್ಚಿಮ ಭಾಗದಲ್ಲಿ ಸ್ಥಿತವಾಗಿದೆ. ಇನ್ನೊಂದು ಶ್ಲೋಕವನ್ನು ಉದಾಹರಿಸುತ್ತ ಅವರು ರಾಮಜನ್ಮಭೂಮಿಯಿಂದ ೩೦೦ ಧನುಷ್ (೧೨೦೦ ಮೊಳ) ದೂರದಲ್ಲಿ ಸರಯೂ ನದಿ ಹರಿಯುತ್ತದೆ ಎಂಬ ಉಲ್ಲೇಖವನ್ನೂ ತೋರಿಸಿದರು. ಈ ಎಲ್ಲ ಭೌಗೋಳಿಕ ವಿವರಗಳ ನೆಲೆಯಲ್ಲಿ ರಾಮಜನ್ಮಭೂಮಿಯು ಇಂದು ಗುರುತಿಸುವ ಸ್ಥಳವೇ ಆಗಿತ್ತು ಎಂಬ ಅಂಶವನ್ನು ಸರ್ವೋಚ್ಚ ನ್ಯಾಯಾಲಯವೂ ಸ್ಥಿರೀಕರಿಸಿತು.

ಈ ರೀತಿಯಾಗಿ ತತ್‌ಕ್ಷಣದ ಪ್ರತಿಕ್ರಿಯೆ ನೀಡಿದ ರಾಮಭದ್ರಾಚಾರ್ಯರು ಹುಟ್ಟುಕುರುಡರು ಎಂದರೆ ಆಶ್ಚರ್ಯವಾಗುತ್ತದೆಯಲ್ಲವೆ? ೧೪/೦೧/೧೯೫೦ರಲ್ಲಿ ಉತ್ತರಪ್ರದೇಶದ ಸಾಂಡೀಕುರ್ದ್ ಎಂಬ ಹಳ್ಳಿಯಲ್ಲಿ ಜನಿಸಿದ ಇವರಿಗೆ ತಂದೆ ತಾಯಿಗಳು ನೀಡಿದ ಹೆಸರು ಗಿರಿಧರ ಮಿಶ್ರಾ. ಎರಡು ತಿಂಗಳ ಮಗುವಾಗಿದ್ದಾಗ ಕಣ್ಣುಗುಡ್ಡೆಯ ರೋಗಕ್ಕೆ ತುತ್ತಾಗಿ ಎರಡೂ ಕಣ್ಣುಗಳನ್ನು ಕಳೆದುಕೊಂಡರು. ಅವರಿಗೆ ೧೨ ವರ್ಷಗಳಾಗುವವರೆಗೂ ಯಾವುದೇ ಸಾಂಪ್ರದಾಯಿಕ ಶಿಕ್ಷಣ ದೊರೆತಿರಲಿಲ್ಲ. ತಮ್ಮ ಕಲಿಕೆಗೆ ಅವರು ಬ್ರೈಲ್ ಲಿಪಿಯನ್ನೂ ಬಳಸಲಿಲ್ಲ. ಇನ್ನೊಬ್ಬರಿಂದ ಓದಿಸಿ ಕೇಳಿಸಿಕೊಂಡು ಕಲಿತ ಅವರು ಇನ್ನೊಬ್ಬರಿಗೆ ಹೇಳಿ ಗ್ರಂಥಗಳನ್ನು ಬರೆಯಿಸುತ್ತಾರೆ.

ಐದು ವರ್ಷದವರಿದ್ದಾಗ ಕೇವಲ ಹದಿನೈದು ದಿನಗಳಲ್ಲಿ ಭಗವದ್ಗೀತೆಯ ೭೦೦ ಶ್ಲೋಕಗಳನ್ನೂ ಏಳನೇ ವರ್ಷಕ್ಕೆ ೧೦೯೦೦ ಪದ್ಯಗಳ ರಾಮಚರಿತ ಮಾನಸವನ್ನು ಕೇವಲ ಅರವತ್ತು ದಿನಗಳಲ್ಲಿ ಕಂಠಪಾಠ ಮಾಡಿಕೊಂಡದ್ದು ಗಿರಿಧರ ಮಿಶ್ರಾರ ದೈತ್ಯಪ್ರತಿಭೆಗೆ ಸಾಕ್ಷಿ. ಏಕಸಂಧಿಗ್ರಾಹಿಯಾಗಿದ್ದ ಅವರು ಹದಿನೇಳನೇ ವರ್ಷದ ನಂತರ ಜಾನ್‌ಪುರದಲ್ಲಿ ಕಾಲೇಜು ವಿದ್ಯಾಭ್ಯಾಸ ಮಾಡಿ ನಂತರ ವಾರಣಾಸಿಯಲ್ಲಿ ಸಂಸ್ಕೃತದಲ್ಲಿ ಮಾಸ್ಟರ್ಸ್ ಪದವಿಯನ್ನು ಪಡೆದರು. ಆಗ ಅವರಿಗೆ ದೊರೆತ ಐದು ಸುವರ್ಣಪದಕಗಳನ್ನು ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರೇ ಪ್ರದಾನ ಮಾಡಿದ್ದರು. ನಂತರ ಎರಡು ವರ್ಷಗಳ ಆಚಾರ್ಯ ಪದವಿಯನ್ನೂ ಏಳು ಚಿನ್ನದ ಪದಕಗಳೊಂದಿಗೆ ಪಡೆದರು. ೧೯೮೧ರಲ್ಲಿ ವ್ಯಾಕರಣದಲ್ಲಿ ಪಿಎಚ್‌ಡಿ ಕೂಡ ಯಶಸ್ವಿಯಾಗಿ ಪಡೆದರು.

ಇಷ್ಟೆಲ್ಲ ಸಾಧನೆಗಳನ್ನು ಮಾಡಿಯೂ ಗಿರಿಧರ ಮಿಶ್ರಾ ಯಾವುದೇ ಉದ್ಯೋಗಕ್ಕೆ ಸೇರಿಕೊಳ್ಳದೆ ವಿಕಲಾಂಗರ ವಿಕಾಸಕ್ಕೆ ಮತ್ತು ಧರ್ಮಪ್ರಸಾರಕ್ಕೆ ತಮ್ಮ ಜೀವನವನ್ನು ಮುಡಿಪಾಗಿರಿಸಿದರು. ಸ್ವಾಮಿ ಕರಪಾತ್ರಿಯವರ ಸಲಹೆಯ ಮೇರೆಗೆ ಶ್ರೀ ಶ್ರೀ ೧೦೦೮ ಶ್ರೀ ರಾಮಚರಣದಾಸ ಮಹಾರಾಜ ಫಾಲಹಾರಿಯವರಿಂದ ರಾಮಾನಂದ ಸಂಪ್ರದಾಯದಲ್ಲಿ ವಿರಕ್ತ ದೀಕ್ಷೆಯನ್ನು ೧೯/೧೧/೧೯೮೩ರಲ್ಲಿ ಪಡೆದು ರಾಮಭದ್ರದಾಸ ಎಂಬ ಹೆಸರಿನಲ್ಲಿ ಧರ್ಮಪ್ರಸಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೊದಲು ಚಿತ್ರಕೂಟದಲ್ಲಿ ಆರುತಿಂಗಳ 'ಪಯೋವ್ರತ'ವನ್ನು ಆಚರಿಸಿದ್ದರು. ೨೪/೦೬/೧೯೮೮ರಲ್ಲಿ ಕಾಶಿಯಲ್ಲಿ ನಡೆದ ವಿದ್ವತ್ ಸಭೆಯಲ್ಲಿ ಚಿತ್ರಕೂಟದ ತುಲಸಿ ಪೀಠದ ಜಗದ್ಗುರುವಾಗಿ ನಿಯುಕ್ತರಾಗಿ ಅಂದಿನಿಂದ ರಾಮಭದ್ರಾಚಾರ್ಯರಾದರು.

ರಾಮಕಥೆಯ ಮೂಲಕ ಜನಪ್ರಿಯರಾದ ಅವರು ರಾಮಚರಿತ ಮಾನಸದ ಮೇಲೆ ಅಧಿಕಾರವಾಣಿಯಿಂದ ಮಾತನಾಡಬಲ್ಲವರಾಗಿದ್ದಾರೆ. ಸಂಸ್ಕೃತವೂ ಸೇರಿದಂತೆ ೨೨ ಭಾಷೆಗಳ ಮೇಲೆ ಅವರು ಪ್ರಭುತ್ವವನ್ನು ಹೊಂದಿದ್ದಾರೆ. ಸಂಸ್ಕೃತದ ಅಷ್ಟಾಧ್ಯಾಯಿ ಮತ್ತು ಪ್ರಸ್ಥಾನತ್ರಯಿಗಳ ಮೇಲೆ ಭಾಷ್ಯವನ್ನು ಬರೆದಿದ್ದಾರೆ. ಇದುವರೆಗೆ ೨೪೦ ಪುಸ್ತಕಗಳನ್ನು, ೫೦ ಪಾಂಡಿತ್ಯಪೂರ್ಣ ಪ್ರಬಂಧಗಳನ್ನು ರಚಿಸಿದ್ದಾರೆ. ಚಿತ್ರಕೂಟದಲ್ಲಿ ಜಗದ್ಗುರು ರಾಮಭದ್ರಾಚಾರ್ಯ ವಿಕಲಾಂಗ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದಾರೆ. ಅನೇಕ ದೂರದರ್ಶನ ವಾಹಿನಿಗಳಲ್ಲಿ ಪ್ರವಚನ ನೀಡುತ್ತಿರುವ ಇವರು ಒಂದು ನಡೆದಾಡುವ ಅಚ್ಚರಿಯೆಂದರೆ ಅತಿಶಯೋಕ್ತಿಯಲ್ಲ.

೧೯೯೨ರಲ್ಲಿ ಅವರು ಇಂಡೋನೇಷ್ಯಾದಲ್ಲಿ ಜರುಗಿದ ಒಂಭತ್ತನೇ ವಿಶ್ವ ರಾಮಾಯಣ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಗಳ ನೇತೃತ್ವವಹಿಸಿದ್ದರು. ವಿಶ್ವದ ಅನೇಕ ದೇಶಗಳನ್ನು ಸಂಚರಿಸಿ ಪ್ರವಚನ ನೀಡಿದರು. ಡೆಟ್ರಾಯಿಟ್ ನಗರದಲ್ಲಿ ನಡೆದ ಧರ್ಮ ಪ್ರಚಾರ ಯಾತ್ರೆಯಲ್ಲಿ ವಿಶೇಷ ವ್ಯಕ್ತಿಯಾಗಿ ಭಾಗವಹಿಸಿದ್ದರು. ಇಸವಿ ೨೦೦೦ದಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ನ್ಯೂಯಾರ್ಕ್ ನಗರದಲ್ಲಿ ನಡೆದ ಸಹಸ್ರಮಾನದ ಶಾಂತಿ ಶೃಂಗಸಭೆಯಲ್ಲಿಯೂ ಭಾಷಣ ಮಾಡಿದ್ದರು.

ಭಾರತದ ಎರಡನೆಯ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣದ ಗೌರವ ಇವರಿಗೆ ದೊರೆತಿದೆ. ಎಪಿಜೆ ಅಬ್ದುಲ್ ಕಲಾಂ, ಸೋಮನಾಥ ಚಟರ್ಜಿ, ವಾಜಪೇಯಿ, ಇಂದಿರಾ ಗಾಂಧಿ ಮುಂತಾದ ಹಿರಿಯ ನಾಯಕರೂ ಗೌರವಿಸುತ್ತಿದ್ದ ರಾಮಭದ್ರಾಚಾರ್ಯರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್ ದೊರೆತಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ ಮುಂತಾದ ರಾಜ್ಯಗಳೂ ಅವರನ್ನು ಗೌರವಿಸಿವೆ.

ಶ್ರೀರಾಮಚಂದ್ರನು ಸೀತಾಮಾತೆಯ ಬಂಧವಿಮೋಚನೆಗೆ ವಾನರಸೇನೆಯೂ ಸೇರಿದಂತೆ ಸಕಲ ಜೀವಪ್ರಭೇದವನ್ನು ಪ್ರೇರೇಪಿಸಿದಂತೆ ತನ್ನ ಜನ್ಮ ಸ್ಥಾನದ ವಿಮೋಚನೆಗೆ ಕೋಟ್ಯಂತರ ಜನರನ್ನು ನಿಯೋಜಿಸಿರುವುದು ಸುಸ್ಪಷ್ಟ. ಅನೇಕ ಮಹನೀಯರು ಮತ್ತು ಕರಸೇವಕರ ಜೊತೆಗೆ ಮಹಂತ ಶ್ರೀ ಶ್ರೀ ರಾಮಭದ್ರಾಚಾರ್ಯರು ಪ್ರಧಾನ ಪಾತ್ರವಹಿಸಲೂ ಅವನ ಸಂಕಲ್ಪವೇ ಕಾರಣ ಎಂಬುದು ಸಂಬಂಧಿತ ಘಟನೆಗಳ ಯೋಗಾಯೋಗದಿಂದ ವ್ಯಕ್ತವಾಗುತ್ತದೆ.

-ಕೆ. ಜನಾರ್ದನ ತುಂಗ

# ಅದಮ್ಯಚೇತನ ತಿಂಗಳ ವರದಿ (15 ಡಿಸೆಂಬರ್ 2023 ರಿಂದ 15 ಜನವರಿ 2024)

**ಕೋಟಿ ಗೀತಾ ಲೇಖನ ಯಜ್ಞದ ದೀಕ್ಷಾ ಸಮಾರಂಭ:** ಪುತ್ತಿಗೆ ಶ್ರೀಪಾದರಾದ ಶ್ರೀ ಸುಗುಣೇಂದ್ರ ತೀರ್ಥರ ಚತುರ್ಥ ಪರ್ಯಾಯದ ಸಂದರ್ಭದಲ್ಲಿ ಜಾಗತಿಕ ಮಟ್ಟದ ಧಾರ್ಮಿಕ ಅಭಿಯಾನ, ಕೋಟಿ ಗೀತಾ ಲೇಖನ ಯಜ್ಞದ ದೀಕ್ಷಾ ಸಮಾರಂಭವು ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಡಿ. 23 ಹಾಗೂ ಡಿ. 24 ರಂದು ಎರಡು ದಿನಗಳ ಕಾಲ ಯಶಸ್ವಿಯಾಗಿ ಜರುಗಿತು. ಕೋಟಿ ಗೀತಾ ಲೇಖನ ಯಜ್ಞ ಸಮಿತಿ ಹಾಗೂ ಉಡುಪಿಯ ಮುಂದಿನ ಪರ್ಯಾಯ ಶ್ರೀ ಪುತ್ತಿಗೆಮಠ ಸಂಯುಕ್ತವಾಗಿ ಈ ಧಾರ್ಮಿಕ ಸಮಾರಂಭ ಆಯೋಜಿಸಿದ್ದವು. ಡಿ. 23ರಂದು ಶ್ರೀ ಗೋವರ್ಧನ ಕ್ಷೇತ್ರದಿಂದ ನ್ಯಾಷನಲ್ ಕಾಲೇಜು ಮೈದಾನದವರೆಗೆ ನಡೆದ ಶೋಭಾಯಾತ್ರೆಗೆ ಮುನ್ನ ಭಗವದ್ಗೀತಾ ಪ್ರದರ್ಶನ ಮಳಿಗೆಗಳ ಉದ್ಘಾಟನೆಯೂ ನಡೆಯಿತು. ಸಮಿತಿಯ ಗೌರವಾಧ್ಯಕ್ಷೆ ಹಾಗೂ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ದೈನಂದಿನ ಬದುಕಿನಲ್ಲಿ ಭಗವದ್ಗೀತೆಯ ಮಹತ್ವವನ್ನು ವಿವರಿಸಿದರು.

ಪುತ್ತಿಗೆ ಮಠಾಧೀಶರಾದ ಪರಮಪೂಜ್ಯ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದಂಗಳವರು ಹಾಗೂ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದಂಗಳವರು ಆಶೀರ್ವಚನ ನೀಡಿ, ಸರ್ವಶಾಸ್ತ್ರಗಳ ಸಾರವೆನಿಸಿದ ಭಗವದ್ಗೀತೆಯ ಅಧ್ಯಯನವು ಲೌಕಿಕ, ಅಲೌಕಿಕ ಸಾಧನೆಗಳಿಗೆ ಸೋಪಾನವಾಗಿದೆ. ಈ ಹಿನ್ನೆಲೆಯಲ್ಲಿ ಜಗತ್ತಿನ ಎಲ್ಲ ಸಜ್ಜನರು ಸೇರಿ ಭಗವದ್ಗೀತೆಯನ್ನು ಪಠಿಸುವಂತಾಗಬೇಕು. ಗೀತೆಯ ವಿವಿಧ ಆಯಾಮಗಳ ಸಂಸ್ಪರ್ಶವಿರುವ ಸಂಭ್ರಮವೇ ಗೀತೋತ್ಸವವಾಗಿದೆ ಎಂದು ಹೇಳಿದರು.

**"ಸೌಂದರ್ಯ ಲಹರೀ ವಿಲಾಸ" ನೃತ್ಯ ರೂಪಕ:** ಬೆಂಗಳೂರಿನ ಸೆಂಟರ್ ಫಾರ್ ಡಿವೈನ್ ಅರ್ಟ್ಸ್ ತಂಡದ ಒಟ್ಟು ೨೨ ಕಲಾವಿದರು ಅದಮ್ಯಚೇತನ ಸಂಸ್ಥೆಯ ವಿವೇಕ ಸಭಾಂಗಣದಲ್ಲಿ ೩೦/೧೨/೨೦೨೩ರಂದು ಪ್ರದರ್ಶಿಸಿದ "ಸೌಂದರ್ಯ ಲಹರೀ ವಿಲಾಸ" ನೃತ್ಯ ರೂಪಕವು ಮನಮೋಹಕವಾಗಿತ್ತು. ಭಾರತೀಯ ಸಂಸ್ಕೃತಿ-ಪರಂಪರೆ ಉಳಿಸಲು ಹಾಗೂ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಅದಮ್ಯ ಚೇತನ ಸಂಸ್ಥೆಯು ಹಮ್ಮಿಕೊಂಡಿರುವ ಮಾಸಿಕ ಅ-ಚಾಟ್ ಕಾರ್ಯಕ್ರಮದಲ್ಲಿ ಶ್ರೀಮತಿ ಲಕ್ಷ್ಮೀ ಬಸವರಾಜ (ತಂಡದ ಮುಖ್ಯಸ್ಥೆ), ಪ್ರಿಯಾ ಗಣೇಶ್, ಪಲ್ಲವಿ, ಲತಾ ರಮೇಶ್, ಶ್ರೀಯಾ ನಾಯಕ್, ಶ್ರುತಿ ಜಗದೀಶ, ಶಾರ್ಲೋವಿ, ಚಿನ್ಮಯಿ, ಲಕ್ಷ್ಮಿ, ಅನನ್ಯ, ಭೂಷಿತ್, ವೆಂಕಟೇಶ್, ವಿದ್ವಾನ್ ಅನಿಲಕುಮಾರ್, ಅಮೃತಾ ಮತ್ತಿತರ ಕಲಾವಿದರು ಭಾಗವಹಿಸಿದ್ದರು. ಶ್ರೀಮತಿ ಸುಧಾ ಪ್ರಸನ್ನ ಮತ್ತು ಶ್ರೀ ಭಾರ್ಗವ ಅವರು ಧ್ವನಿ-ಬೆಳಕನ್ನು ಸಂಯೋಜಿಸಿದ್ದರು.



ಇದೇ ಸಂದರ್ಭದಲ್ಲಿ, "ಚಿಣ್ಣರ ಚೇತನ" ಗೋಡೆಪತ್ರಿಕೆಯ ಜನವರಿ-2024ರ ಸಂಚಿಕೆಯನ್ನು ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ.ವಿ. ಕೃಷ್ಣಭಟ್ಟ ಹಾಗೂ ಅನಂತಕುಮಾರ್ ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಲೋಕಾರ್ಪಣೆಗೊಳಿಸಿದರು.

**ಹುಬ್ಬಳ್ಳಿಯಲ್ಲಿ "ಗ್ರಾಮ ಚೇತನ" ಶಿಬಿರ:** ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆ, ಅನಂತಕುಮಾರ್ ಪ್ರತಿಷ್ಠಾನ ಹಾಗೂ ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಗಳು ಸಂಯುಕ್ತವಾಗಿ ೨೦೨೩ರ ಡಿ. ೨೩ ರಂದು ಹುಬ್ಬಳ್ಳಿಯ ವಿಜಯನಗರದ ಅನಂತ ಪ್ರೇರಣಾ ಕೇಂದ್ರದ ಸಭಾಂಗಣದಲ್ಲಿ ಗ್ರಾಮೀಣ ಮಹಿಳೆಯರಿಗಾಗಿ ಆಯೋಜಿಸಿದ್ದ ನೇತೃತ್ವ ವಿಕಸನ, "ಗ್ರಾಮ ಚೇತನ" ಶಿಬಿರವು ಯಶಸ್ವಿಯಾಗಿ ನಡೆಯಿತು.

ರಾಜ್ಯ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯ ಡಾ. ಪ್ರಕಾಶ ಭಟ್ ಅವರು ಮುಖ್ಯ ಉಪನ್ಯಾಸಕರಾಗಿ ಮಾತನಾಡಿ, ಸಮಾಜಹಿತದ ಸಮಗ್ರ ಚಿಂತನೆಯೇ ನಾಯಕತ್ವದ ಮೂಲವಾಗಿದೆ ಎಂದರು. ನಗರದ ಈಶ್ವರ ದೇವಸ್ಥಾನದ ಧರ್ಮಾಧಿಕಾರಿ ಶ್ರೀ ಲಕ್ಷ್ಮಣರಾವ್ ಓಕ್ ಅವರು ಸಮಾರಂಭ ಉದ್ಘಾಟಿಸಿದರು. "ಕನ್ನಡಪ್ರಭ" ಪತ್ರಿಕೆಯ ಸ್ಥಾನಿಕ ಸಂಪಾದಕ ಮಲ್ಲಿಕಾರ್ಜುನ ಸಿದ್ದಣ್ಣವರ್ ಅತಿಥಿಗಳಾಗಿದ್ದರು. ಧಾರವಾಡ ತಾಲೂಕಿನ ಜೀರಗಿವಾಡ, ಹುಬ್ಬಳ್ಳಿ ತಾಲೂಕಿನ ಕಿರೇಸೂರು, ಬಾಗಲಕೋಟೆ ಜಿಲ್ಲೆಯ ಹಂಗರಗಿ ಗ್ರಾಮಸ್ಥ ಮಹಿಳೆಯರು, ಗ್ರಾಮ ಪಂಚಾಯತ್ ಸದಸ್ಯರು ಪಾಲ್ಗೊಂಡಿದ್ದರು. ಶ್ರೀಮತಿ ಸಂಧ್ಯಾ ದೀಕ್ಷಿತ್ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಶ್ರೀಮತಿ ವೀಣಾ ಅಠವಲೆ ಅವರು " ಸಮೃದ್ಧ ಭಾರತ" ಕುರಿತ ಸಂಕಲ್ಪ ಗೀತೆ ಹಾಡಿ, ಸ್ವಾಗತಿಸಿ, ವಂದಿಸಿದರು.




ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Venkatesh Manu / Trivikram Joshi**
Inputs: **Poornaprajna / Srikanth K / ACF / AKP**
Photographs: **Gopal TS / Internet Sources / AKP / ACF**
Acknowledgements: **Dr. Mamatha P Raj / Pradeep Oak**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in



ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಬೆಂಗಳೂರಿನ ವಿಮಾನ ಅಭಿವೃದ್ಧಿ ಸಂಸ್ಥೆಯ (ಎಡಿಎ) ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.



ಕಾಶ್ಮೀರದ ಶಾರದಾ ಸೇವಾ ಸಮಿತಿಯ ಸಂಸ್ಥಾಪಕ ಹಾಗೂ ಮುಖ್ಯಸ್ಥ ಶ್ರೀ ರವೀಂದ್ರ ಪಂಡಿತ್ ಅವರು 2023ರ ಡಿ. 28ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿದ್ದರು.



ಬೆಂಗಳೂರಿನ ಶಂಕರಪುರದ ಶ್ರೀ ಶೃಂಗೇರಿ ಮಠದ ಶ್ರೀ ಭಾರತೀತೀರ್ಥ ಸಭಾಭವನದಲ್ಲಿ 2024ರ ಜ. 6ರಂದು ನಡೆದ ರಾಜ್ಯಮಟ್ಟದ ಅಖಿಲ ಕರ್ನಾಟಕ, ವಿಪ್ರ ಮಹಿಳಾ ಸಮಾವೇಶದಲ್ಲಿ ಅದಮ್ಯ ಚೇತನ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮಾತನಾಡಿದರು.



ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ ಶ್ರೀ ವಿಜಯಕುಮಾರ್ ಕುಚನೂರೆ ಅವರು 2024ರ ಜ. 10 ರಂದು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ್ದರು.



ಬೆಂಗಳೂರಿನ ಚಾಮರಾಜಪೇಟೆಯ ಶಾರದಾ ಸ್ತ್ರೀ ಸಮಾಜ ಹೈಸ್ಕೂಲಿನ ಒಟ್ಟು 60 ವಿದ್ಯಾರ್ಥಿಗಳು ಇಬ್ಬರು ಶಿಕ್ಷಕರೊಡನೆ 2024ರ ಜ. 10 ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿದ್ದರು



ಬೆಂಗಳೂರಿನ ಬ್ಯಾಟರಾಯನಪುರದ ಶಾರದಾ ಪ್ರೌಢಶಾಲೆಯ 55 ವಿದ್ಯಾರ್ಥಿಗಳು ಇಬ್ಬರು ಶಿಕ್ಷಕರೊಡನೆ 2024ರ ಜ. 9ರಂದು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ್ದರು.




ಹುಬ್ಬಳ್ಳಿಯ ಅದಮ್ಯ ಚೇತನ ಪ್ರತಿಷ್ಠಾನವು ಹುಬ್ಬಳ್ಳಿಯ ಸವಾಯಿ ಗಂಧರ್ವ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ SSLC ಪರೀಕ್ಷಾ ತಯಾರಿ ಕೈಪಿಡಿ "ಕಶ್ಯಪ" ವನ್ನು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಬಿಡುಗಡೆ ಮಾಡಿದರು.



ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (ಎಐಸಿಟಿಇ) ಅಧ್ಯಕ್ಷ ಪ್ರೊ. ಟಿ.ಜಿ. ಸೀತಾರಾಮ್ ಹಾಗೂ ಅವರ ಪತ್ನಿ ಶ್ರೀಮತಿ ಅನುರಾಧಾ ಅವರು 2024ರ ಜ. 12ರಂದು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದ್ದರು.

## ಅನಂತ ಚಿತ್ರಸಂಪುಟ

ಭಾರತದೆಲ್ಲೆಡೆ ಜನಜಾಗೃತಿಯನ್ನು ಮೂಡಿಸಲು ಭಾರತೀಯ ಜನತಾ ಪಕ್ಷವು ಅನೇಕ ಯಾತ್ರೆಗಳನ್ನು ಆಯೋಜಿಸಿತ್ತು. ಸರ್ವಶ್ರೀ ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಅದ್ವಾನಿ, ಮುರಳಿ ಮನೋಹರ ಜೋಶಿ, ವೆಂಕಯ್ಯ ನಾಯ್ಡು, ಉಮಾಭಾರತಿ, ಪ್ರಮೋದ ಮಹಾಜನ್ ಮೊದಲಾದವರ ಮಾರ್ಗದರ್ಶನದಲ್ಲಿ ನಡೆದ ಈ ಯಾತ್ರೆಗಳಲ್ಲಿ ಅನಂತಕುಮಾರ್ ಅವರು ಸಕ್ರಿಯವಾಗಿ ಪಾಲ್ಗೊಂಡು ಯಾತ್ರೆಗಳನ್ನು ಯಶಸ್ವಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

























